ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

EMAIL : dairyadadaari@gmail.com
ಸಂಪುಟ: 01 ಸಂಚಿಕೆ: 119
ಬೆಲೆ ರೂ : 2.00
ರಾಯಚೂರು
ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795
ಗುರುವಾರ: 16-04-2026

## ವಿಮಾನ ನಿಲ್ದಾಣದಲ್ಲಿ ಪ್ರಧಾನಿಯನ್ನು ಸ್ವಾಗತಿಸಿ 18 ಬೇಡಿಕೆಗಳ ಮನವಿ ಸಲ್ಲಿಸಿದ ಸಿಎಂ ಸಿದ್ದರಾಮಯ್ಯ

**ಬೆಂಗಳೂರು,ಏ.15–** ಕರ್ನಾಟಕಕ್ಕೆ ಭೇಟಿ ನೀಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮೀಸಲಾತಿಯ ಪ್ರಮಾಣವನ್ನು ಶೇ. 56ಕ್ಕೆ ಹೆಚ್ಚಿಸಬೇಕು ಎಂಬುದು ಸೇರಿದಂತೆ ಒಟ್ಟು 18 ಬೇಡಿಕೆಗಳ ಮನವಿ ಪತ್ರವನ್ನು ಸಲ್ಲಿಸಿದ್ದಾರೆ.

ಎಸ್‌ಸಿ–ಎಸ್‌ಟಿ, ಓಬಿಸಿ ಪಟ್ಟಿಯಲ್ಲಿರುವ ಜಾತಿಗಳ ಮೀಸಲಾತಿಯ ಪ್ರಮಾಣವನ್ನು ಶೇ. 56ಕ್ಕೆ ಹೆಚ್ಚಿಸಿರುವ ರಾಜ್ಯಸರ್ಕಾರದ ನಿರ್ಣಯವನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರ್ಪಡೆ ಮಾಡಬೇಕು. ರಾಜ್ಯ ಸರ್ಕಾರ ಶಿಫಾರಸು ಮಾಡಿರುವ ಕೆಲವು ಹಿಂದುಳಿದ ಜಾತಿಗಳನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಬೇಕೆಂದು ಮನವಿ ಮಾಡಿದ್ದಾರೆ.

ಕಲ್ಯಾಣ ಕರ್ನಾಟಕ 371ಜೆ ಅಡಿಯಲ್ಲಿ ಕೇಂದ್ರ ಸರ್ಕಾರ ವಾರ್ಷಿಕ 5 ಸಾವಿರ ಕೋಟಿ ರೂ. ಅನುದಾನವನ್ನು ನೀಡಬೇಕು. ಉತ್ತರ ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಠ ಒಂದು ಸಾರ್ವಜನಿಕ ವಲಯದ ಉದ್ಯಮವನ್ನು ಸ್ಥಾಪಿಸಬೇಕು ಎಂದು ಸಲಹೆ ನೀಡಿದ್ದಾರೆ.
ಕರ್ನಾಟಕವು ದೇಶದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿದ್ದು, ಮಾಹಿತಿ ತಂತ್ರಜ್ಞಾನ, ಉತ್ಪಾದನೆ, ಕೃಷಿ ಹಾಗೂ ಸೇವಾ ವಲಯದಲ್ಲಿ ಮುಂಚೂಣಿಯಲ್ಲಿದೆ.

ಸಹಕಾರ ಒಕ್ಕೂಟದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಕರ್ನಾಟಕ ಅತೀ ಹೆಚ್ಚು ಭಾಗಿದಾರಿಕೆ ಹೊಂದಿದೆ. ರಾಷ್ಟ್ರೀಯ ಖಜಾನೆಗೆ ಹೆಚ್ಚಿನ ತೆರಿಗೆ ನೀಡುತ್ತಿದೆ. ದೀರ್ಘ ಕಾಲದಿಂದ ಬಾಕಿ ಉಳಿದಿರುವ ಸಮಸ್ಯೆಗಳಿಗೆ ಕೇಂದ್ರ ಸರ್ಕಾರ ತುರ್ತು ಗಮನ ನೀಡಬೇಕು. ಕರ್ನಾಟಕದ ಪ್ರಗತಿಯಲ್ಲಿ ವೇಗಗೊಳಿಸಲು ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ.

ಕೋಲಾರದಲ್ಲಿ ರೈಲ್ವೆ ಕೋಚ್ ಫ್ಯಾಕ್ಟರಿಯನ್ನು ಈ ಮೊದಲು ರೈಲ್ವೆ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಅದಕ್ಕಾಗಿ ಕೋಲಾರದಲ್ಲಿ 1,123 ಎಕರೆ ಜಮೀನನ್ನು ಒದಗಿಸಲಾಗಿದೆ. ಆದರೆ ಈವರೆಗೂ







ಅಲ್ಲಿ ಕಾರ್ಖಾನೆ ಆರಂಭವಾಗಿಲ್ಲ. ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ ಮತ್ತು ಉತ್ತಮ ಸಂಪರ್ಕಕ್ಕಾಗಿ ಪ್ರಸ್ತಾಪಿತ ಹೈಸ್ಪಿಡ್ ರೈಲು ಕಾರಿಡಾರ್ ಯೋಜನೆಯಲ್ಲಿ ಬೆಂಗಳೂರು ಮತ್ತು ಮೈಸೂರು ವಿಭಾಗವನ್ನು ಸೇರಿಸಬೇಕು ಎಂದು ಮನವಿ ಮಾಡಿದ್ದಾರೆ.

ಬೆಂಗಳೂರು ಉಪನಗರ ರೈಲು ಮಾರ್ಗಕ್ಕೆ ಹಣ ಬಿಡುಗಡೆ ಮಾಡಬೇಕು. ಬೆಂಗಳೂರು–ಮುಂಬೈ ಹೈಸ್ಪಿಡ್ ರೈಲು ಕಾರಿಡಾರ್ ಯೋಜನೆಯನ್ನು ಶೀಘ್ರವೇ ಉದ್ಘಾಟಿಸಬೇಕೆಂದು ಮನವಿ ಮಾಡಿದ್ದಾರೆ.

ಸುರಕ್ಷಿತ ಕುಡಿಯುವ ನೀರಿನ ಯೋಜನೆ ಜಲಜೀವನ್ ಮಿಷನ್ ಅಡಿ ಕೇಂದ್ರದ ಪಾಲು 17,554 ಕೋಟಿ ರೂಪಾಯಿಗಳನ್ನು ಶೀಘ್ರವೇ ಬಿಡುಗಡೆ ಮಾಡಬೇಕು. ನವೀಕರಣ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಹಣ ಬಿಡುಗಡೆ ಮಾಡಬೇಕು. ನೀತಿ ನಿಯಮಗಳ ಸಮಸ್ಯೆಗಳನ್ನು ಬಗೆ ಹರಿಸಬೇಕು.

ಕಳೆದ 12 ವರ್ಷಗಳಿಂದಲೂ ರಾಜ್ಯದ ಹೊಸ ಹೆದ್ದಾರಿ ಯೋಜನೆಗಳನ್ನು ಕೇಂದ್ರ ಸ್ವಿಕರಿಸಿಲ್ಲ, ಈ ಬಗ್ಗೆ ಗಮನ ಹರಿಸಬೇಕು. ಬೆಂಗಳೂರಿಗೆ ಮೂಲ ಸೌಕರ್ಯ ಬಲಪಡಿಸಲು 6 ಸಾವಿರ ಕೋಟಿ ರೂ. ಅನುದಾನ ನೀಡಬೇಕು. ಬೆಂಗಳೂರಿನ ಕುಡಿಯುವ ನೀರಿಗಾಗಿ 67 ಟಿಎಂಸಿ ಸಾಮರ್ಥ್ಯದ 400 ಮೆಗಾವ್ಯಾಟ್ ಜಲವಿದ್ಯುತ್ ಉತ್ಪಾದನೆಯ ಮೇಕೆದಾಟು ಯೋಜನೆಗೆ ಅನುಮೋದಿಸಲು ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತು ಜಲ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದ್ದಾರೆ. 2ನೇಪುಟಕ್ಕೆ►

## ಯೋಗೇಶ್ ಗೌಡ ಹತ್ಯೆ ಪ್ರಕರಣ: ಶಾಸಕ ವಿನಯ್ ಕುಲಕರ್ಣಿ ದೋಷಿ




**ಬೆಂಗಳೂರು, ಏ.15–** ಯೋಗೇಶ್ ಗೌಡ ಹತ್ಯೆ ಪ್ರಕರಣದಲ್ಲಿ ಧಾರವಾಡ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ದೋಷಿ ಎಂದು ಜನಪ್ರತಿನಿಧಿಗಳ ನ್ಯಾಯಾಲಯ ಇಂದು ಮಹತ್ವದ ತೀರ್ಪು ಪ್ರಕಟಿಸಿದೆ.

ಜಿಲ್ಲಾ ಪಂಚಾಯಿತ್ತಿ ಸದಸ್ಯ ಯೋಗೇಶ್ ಗೌಡ ಹತ್ಯೆ ಪ್ರಕರಣದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಶಿಕ್ಷೆಯ ಪ್ರಮಾಣವನ್ನು ನಾಳೆ ಪ್ರಕಟಿಸುವುದಾಗಿ ತಿಳಿಸಿದೆ.
ಹತ್ಯೆ ಪ್ರಕರಣದಲ್ಲಿ 21 ಮಂದಿ ದೋಷಿಗಳಿದ್ದಾರೆ ಎಂದು ಹೇಳಿರುವ ನ್ಯಾಯಾಲಯ, 20 ಹಾಗೂ 21ನೇ ಆರೋಪಗಳನ್ನು ಖುಲಾಸೆಗೊಳಿಸಿ ಉಳಿದ ಆರೋಪಿಗಳನ್ನು ವಶಕ್ಕೆ ಪಡೆಯುವಂತೆ ಕೋರ್ಟ್ ಸಿಬಿಐಗೆ ನಿರ್ದೇಶನ ನೀಡಿದೆ.

2016 ರಲ್ಲಿ ಈ ಹತ್ಯೆ ನಡೆದಿದ್ದಾಗ ರಾಜ್ಯದಲ್ಲಿ ಭಾರೀ ಸಂಚಲನ ಸೃಷ್ಟಿಸಿತ್ತು. ಜೈಲಿನಲ್ಲಿ ಇದ್ದುಕೊಂಡೇ ಯೋಗಿಶ್ ಗೌಡ ಜಿಲ್ಲಾ ಪಂಚಾಯತ್ ಚುನಾವಣೆ ಗೆದ್ದಿದ್ದರು. ಈ ಕೊಲೆಯಲ್ಲಿ ಆಗಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿನಯ್ ಕುಲಕರ್ಣಿ ಹೆಸರು ಕೇಳಿ ಬಂದಿದ್ದರಿಂದ ವ್ಯಾಪಕ ಚರ್ಚೆಗೂ ಎಡೆಮಾಡಿಕೊಟ್ಟಿತ್ತು.

2ನೇಪುಟಕ್ಕೆ►

## ಶ್ರೀ ಚೌಡೇಶ್ವರಿ ಜಾತ್ರಾ ಮಹೋತ್ಸವಕ್ಕೆ ಮಾನ್ವಿಯಲ್ಲಿ ಭರ್ಜರಿ ಸಿದ್ಧತೆ

### ಏಪ್ರಿಲ್ 19ರಿಂದ 21ರವರೆಗೆ ಭಕ್ತಿಭಾವದ ಕಾರ್ಯಕ್ರಮಗಳು

ಧೈರ್ಯದ ದಾರಿ

**ಮಾನ್ವಿ, ಏ.15:** ನಗರದ ತೊಗಟವೀರ ಕ್ಷತ್ರಿಯ ಸಮಾಜದ ವತಿಯಿಂದ ಆದಿಪರಾಶಕ್ತಿ ಜಗನ್ಮಾತೆ ಶ್ರೀ ಶ್ರೀ ಶ್ರೀ ಚೌಡೇಶ್ವರಿ ದೇವಿಯ 39ನೇ ವಾರ್ಷಿಕ ಜಾತ್ರಾ ಮಹೋತ್ಸವವು ಏಪ್ರಿಲ್ 19ರಿಂದ 21ರವರೆಗೆ ಧಾರ್ಮಿಕ ಸಂಭ್ರಮದೊಂದಿಗೆ ನಡೆಯಲಿದ್ದು, ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ.

ಜಾತ್ರೆಯ ಮೊದಲ ದಿನವಾದ ಏಪ್ರಿಲ್ 19ರಂದು ಬೆಳಿಗ್ಗೆ 6 ಗಂಟೆಗೆ ದೇವಿ ಗುಡಿಯಿಂದ ವಾದ್ಯ–ವೈಭವ, ಭಜನೆ, ಕುಂಭ–ಕಳಸ ಹಾಗೂ ನಂದಿಕೋಲ ಸೇವೆಗಳೊಂದಿಗೆ ದೇವಿಯ ಪಲ್ಲಕ್ಕಿ ಉತ್ಸವ ಆರಂಭಗೊಳ್ಳಲಿದೆ. ಈ ವೇಳೆ ಪಲ್ಲಕ್ಕಿ ಶ್ರೀ ಜಡೆ ಬಸವೇಶ್ವರ ಗುಡಿಗೆ ತೆರಳಿ ಪೂಜೆ ಸಲ್ಲಿಸಿ, ತುಂಗಭದ್ರ ನದಿಯಿಂದ ತರಲಾದ ಪವಿತ್ರ ಜಲದಿಂದ ದೇವಿಗೆ ಅಭಿಷೇಕ ಹಾಗೂ ವಿಶೇಷ ಪೂಜೆ ನೆರವೇರಿಸಲಾಗುವುದು.
ಮಧ್ಯಾಹ್ನ 1 ಗಂಟೆಗೆ ಮಹಾಪ್ರಸಾದ ವಿತರಣೆ ನಡೆಯಲಿದೆ.

ಅದೇ ದಿನ ಸಂಜೆ 4 ಗಂಟೆಯಿಂದ ಶ್ರೀ ಚೌಡೇಶ್ವರಿ ಮಹಿಳಾ ಮಂಡಳಿ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು, ಸಂಜೆ 6.30ಕ್ಕೆ ತೊಗಟವೀರ ಕ್ಷತ್ರಿಯ ಯುವಕ ಸಂಘದವರಿಂದ "ಸಹಸ್ರ ದೀಪೋತ್ಸವ" ಹಾಗೂ ಭಕ್ತಿ ಕಾರ್ಯಕ್ರಮಗಳು ನಡೆಯಲಿವೆ.

ಏಪ್ರಿಲ್ 20ರಂದು (ಸೋಮವಾರ) ಬೆಳಿಗ್ಗೆ 6:08ಕ್ಕೆ "ಸಹಸ್ರ ಕುಂಕುಮಾರ್ಚನೆ" ಕಾರ್ಯಕ್ರಮವು ಸದ್ಭಕ್ತರ ಪರವಾಗಿ ಶ್ರೀ ವೇ. ಸಿದ್ದಯ್ಯಸ್ವಾಮಿಗಳು ಜೀಕಲಪರ್ವಿ ಅವರಿಂದ ನೆರವೇರಲಿದೆ. ಸಂಜೆ 4 ಗಂಟೆಯಿಂದ ಭಕ್ತರು ಸೇರಿ ವಾದ್ಯ–ವೈಭವಗಳೊಂದಿಗೆ ಭಜನೆ, ಕಳಸ–ಕನ್ನಡಿ, ನಂದಿಕೋಲು ಸೇವೆಗಳೊಂದಿಗೆ ದೇವಿಯ ಪಲ್ಲಕ್ಕಿ ಉತ್ಸವವು ಶ್ರೀ ಗಣೇಶ, ಮಹಾಲಕ್ಷ್ಮೀ, ಸರಸ್ವತಿ ಹಾಗೂ ಈಶ್ವರ ದೇವಸ್ಥಾನಗಳಿಗೆ ತೆರಳಿ ಪೂಜೆ ಸಲ್ಲಿಸಿ ಮರಳಲಿದೆ.

ರಾತ್ರಿ 8 ಗಂಟೆಗೆ "ಲಘು ರಥೋತ್ಸವ" ಪ.ಪೂ. ಶ್ರೀ ಶ್ರೀ ಷ.ಬ್ರ. ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಅಮೃತ ಹಸ್ತದಿಂದ ನೆರವೇರಲಿದೆ.

ಜಾತ್ರೆಯ ಅಂತಿಮ ದಿನವಾದ ಏಪ್ರಿಲ್ 21ರಂದು ಮುಂಜಾನೆ 3:44ಕ್ಕೆ ಧನಸ್ಸು ಲಗ್ನದಲ್ಲಿ 31ನೇ ವರ್ಷದ "ಜ್ಯೋತಿಗಳ ಉತ್ಸವ" ಭಜನೆ ಹಾಗೂ ಧಾರ್ಮಿಕ ವೈಭವದೊಂದಿಗೆ ಜರುಗಲಿದೆ.

ಜಾತ್ರಾ ಅಂಗವಾಗಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾಗುವಂತೆ ಸಮಿತಿ ಮನವಿ ಮಾಡಿದೆ.



ಇದೇ ವೇಳೆ ನಿರ್ಮಾಣ ಹಂತದಲ್ಲಿರುವ ಶ್ರೀ ಚೌಡೇಶ್ವರಿ ದೇವಿಯ ದೇವಸ್ಥಾನದ ಶಿಲಾ ಕಟ್ಟಡ ನಿರ್ಮಾಣಕ್ಕಾಗಿ ಸುಮಾರು 1.5 ಕೋಟಿ ರೂ. ದೇಣಿಗೆ ಸಂಗ್ರಹ ಗುರಿ ಹೊಂದಿರುವುದಾಗಿ ತಿಳಿಸಲಾಗಿದ್ದು, ಭಕ್ತರು ದೇಣಿಗೆ ನೀಡುವಂತೆ ಕೋರಲಾಗಿದೆ.

ಜಾತ್ರಾ ವ್ಯವಸ್ಥೆಯನ್ನು ತೊಗಟವೀರ ಕ್ಷತ್ರಿಯ ಸಂಘ, ತೊಗಟವೀರ ಕ್ಷತ್ರಿಯ ಯುವಕ ಸಂಘ ಹಾಗೂ ಶ್ರೀ ಚೌಡೇಶ್ವರಿ ಮಹಿಳಾ ಮಂಡಳಿ ಸಂಯುಕ್ತವಾಗಿ ನಿರ್ವಹಿಸುತ್ತಿವೆ. ಹೆಚ್ಚಿನ ಮಾಹಿತಿಗಾಗಿ 9845466066, 6363233704, 9632021422, 9900696300 ಸಂಖ್ಯೆಗಳಿಗೆ ಸಂಪರ್ಕಿಸುವಂತೆ ತಿಳಿಸಿದ್ದಾರೆ.



"ಶ್ರೀ ಚೌಡೇಶ್ವರಿ ಜಾತ್ರಾ ಮಹೋತ್ಸವವು ನಮ್ಮ ಸಂಪ್ರದಾಯ, ಭಕ್ತಿಭಾವ ಮತ್ತು ಸಮಾಜದ ಐಕ್ಯತೆಯನ್ನು ಪ್ರತಿಬಿಂಬಿಸುವ ಮಹತ್ವದ ಧಾರ್ಮಿಕ ಉತ್ಸವವಾಗಿದೆ. ಈ ಜಾತ್ರೆಯಲ್ಲಿ ವಿವಿಧ ಪೂಜಾ ವಿಧಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಧಾರ್ಮಿಕ ಆಚರಣೆಗಳು ಭಕ್ತರಲ್ಲಿ ಆಧ್ಯಾತ್ಮಿಕ ಚೈತನ್ಯವನ್ನು ಹೆಚ್ಚಿಸುತ್ತವೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕು ಹಾಗೂ ಈ ಮಹೋತ್ಸವವನ್ನು ಯಶಸ್ವಿಗೊಳಿಸಬೇಕು."
–ಪಿರುಮಾಳ್ ವೀರೇಶ್, ಕಾರ್ಯದರ್ಶಿಗಳು ತೊಗಟವೀರ ಕ್ಷತ್ರಿಯ ಯುವಕ ಸಂಘ, ಮಾನ್ವಿ

## ಸಿರವಾರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ಜಯಂತಿ ಆಚರಣೆ: ಶೋಷಿತರ ಬದುಕಿನ ಬೆಳಕು ಈ ಇಬ್ಬರು ಮಹನೀಯರು

ಧೈರ್ಯದ ದಾರಿ





**ಸಿರವಾರ:** "ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ್ ರಾಮ್ ಅವರು ಶೋಷಿತ ಸಮುದಾಯಗಳ ಎರಡು ಕಣ್ಣುಗಳಿದ್ದಂತೆ," ಎಂದು ಹಿರಿಯ ವಕೀಲರಾದ ಪಿ. ರವಿಕುಮಾರ್ ಬಣ್ಣಿಸಿದರು.
ಪಟ್ಟಣದ ಬಸ್ ನಿಲ್ದಾಣದ ಬಳಿಯ ಜೆ. ಶರಣಪ್ಪ ಗೌಡರ ಆವರಣದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತ್, ಪಟ್ಟಣ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಡಾ. ಬಾಬು ಜಗಜೀವನ್ ರಾಮ್ ಅವರ 119ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.
ಉಪನ್ಯಾಸದ ಪ್ರಮುಖಾಂಶಗಳು:
**ಅಂಬೇಡ್ಕರ್ ಅವರ ಸಾಧನೆ:** ಜಗತ್ತಿನಲ್ಲಿ 32 ಪದವಿಗಳನ್ನು ಪಡೆದ ಏಕೈಕ ಮಹಾನ್ ವ್ಯಕ್ತಿ ಬಾಬಾ ಸಾಹೇಬ್ ಅಂಬೇಡ್ಕರ್. 1930ರ ದುಂಡು ಮೇಜಿನ ಪರಿಷತ್ತಿನಲ್ಲಿ ಶೋಷಿತರ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಹಕ್ಕುಗಳಿಗಾಗಿ ಅವರು ಗಟ್ಟಿಯಾಗಿ ಧ್ವನಿ ಎತ್ತಿದ್ದರು.
**ಸಂವಿಧಾನ ಸಮರ್ಪಣೆ:** ದೇಶದ ಸರ್ವಜನರ ಹಿತಕ್ಕಾಗಿ 2 ವರ್ಷ, 11 ತಿಂಗಳು ಹಾಗೂ 18 ದಿನಗಳ ಕಾಲ ಶ್ರಮಿಸಿ ಬೃಹತ್ ಸಂವಿಧಾನವನ್ನು ರಚಿಸಿದರು. ಅವರ ಮಾರ್ಗದಲ್ಲಿ ಸಾಗುವುದೇ ಅವರಿಗೆ ನಾವು ಸಲ್ಲಿಸುವ ಗೌರವ ಎಂದು ರವಿಕುಮಾರ್ ತಿಳಿಸಿದರು. 2ನೇಪುಟಕ್ಕೆ

## ರಾಜ್ಯ ಸರ್ಕಾರವು ಉತ್ತಮ ಆಡಳಿತವನ್ನು ನೀಡುವಲ್ಲಿ ವಿಫಲವಾಗಿದೆ:ಬಿ.ವಿ.ನಾಯಕ

ಧೈರ್ಯದ ದಾರಿ



**ಮಾನ್ವಿ:** ಪಟ್ಟಣದ ಶ್ರೀ ಸಂಜೀವರಾಯ ದೇವಸ್ಥಾನದ ಸಭಾಂಗಣದಲ್ಲಿ ಭಾರತೀಯ ಜನತಾ ಪಾರ್ಟಿ ಮಾನ್ವಿ ಮಂಡಲದ ವತಿಯಿಂದ ನಡೆದ ಪಂ.ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ–2026 ಮಂಡಲ ಮಟ್ಟದ ಪ್ರಶಿಕ್ಷಣ ವರ್ಗ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾಜಿ ಸಂಸದ ಬಿ.ವಿ.ನಾಯಕ ಮಾತನಾಡಿ ರಾಜ್ಯ ಸರ್ಕಾರವು ರಾಜ್ಯದಲ್ಲಿ ಉತ್ತಮ ಆಡಳಿತವನ್ನು ನೀಡುವಲ್ಲಿ ಹಾಗೂ ರಾಜ್ಯದ ಅಭಿವೃದ್ಧಿ ಕೈಗೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿದ್ದು ಜನರು .ರಾಜ್ಯ ಸರಕಾರದ ದುರಡಳಿತದ ವಿರುದ್ದ ಆಸಮಾಧನಗೊಂಡಿದ್ದು, ಕೇಂದ್ರದಲ್ಲಿ ಬಿಜೆಪಿ ನೇತೃತ್ವದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಉತ್ತಮ ಆಡಳಿತವನ್ನು ಜನರು ಮೆಚ್ಚಿಕೊಂಡಿದ್ದು ರಾಜ್ಯದಲ್ಲಿಯು ಕೂಡ ಬಿಜೆಪಿ ನೇತೃತ್ವದ ಸರಕಾರವನ್ನು ಜನರು ಬಯಸುತ್ತಿರುವುದರಿಂದ ಪಕ್ಷದ ಕಾರ್ಯಕರ್ತರು ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರಕಾರದ ಸಾಧನೆಗಳನ್ನು, ಪ್ರಗತಿಪರ ಯೋಜನೆಗಳ ಬಗ್ಗೆ ಹಾಗೂ ಪ್ರಧಾನಿ ನರೇಂದ್ರ ಮೋದಿಯವರ ಉತ್ತಮ ಆಡಳಿತದ ಬಗ್ಗೆ ಮನೆ ಮನೆಗೆ ತಲುಪಿಸಿದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರದಲ್ಲಿನ ಅಂತರಿಕ ಭಿನ್ನಮತ ಹಾಗೂ ಅಸಾಮಾಧನದಿಂದ ರಾಜ್ಯ ಸರಕಾರ ಯಾವುದೆ ಕ್ಷಣದಲ್ಲದರು ಪತ್ತನವಾಗಲಿದ್ದು ರಾಜ್ಯದಲ್ಲಿ ಮತ್ತು ಮಾನ್ವಿಯಲ್ಲಿ ಅಧಿಕಾರವನ್ನು ಹಿಡಿಯುವುದಕ್ಕೆ ಬಿಜೆಪಿ ಕಾರ್ಯಕರ್ತರು ಸಿದ್ದರಾಗಿರಬೇಕು 2ನೇಪುಟಕ್ಕೆ

ಮೊದಲನೇ ಪುಟದಿಂದ

# ವಿಮಾನ ನಿಲ್ದಾಣದಲ್ಲಿ ಪ್ರಧಾನಿಯನ್ನು ಸ್ವಾಗತಿಸಿ 18 ಬೇಡಿಕೆಗಳ ಮನವಿ ಸಲ್ಲಿಸಿದ ಸಿಎಂ ಸಿದ್ದರಾಮಯ್ಯ

ಪಿಎಂಕೆಎಸ್‌ವೈ-ಎಐಬಿಪಿ ಯೋಜನೆಯಡಿ ಭದ್ರಾಮೇಲ್ದಂಡೆ ಯೋಜನೆಗೆ 2023ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾದ 5,300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕು ಮತ್ತು ಯೋಜನೆಗೆ ರಾಷ್ಟ್ರೀಯ ಸ್ಥಾನಮಾನ ನೀಡಬೇಕು. ಕೃಷ್ಣಾಜಲ ವಿವಾದ ನ್ಯಾಯಮಂಡಳಿ ಎರಡರ ತೀರ್ಪನ್ನು ಅಧಿಸೂಚನೆ ಹೊರಡಿಸಬೇಕು. ಕರ್ನಾಟಕ ತನ್ನ ಪಾಲಿನ 173 ಟಿಎಂಸಿ ನೀರನ್ನು ಬಳಸಿಕೊಳ್ಳಲು ಸಹಕಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಮಹಾದಾಯಿ ನದಿಗೆ ಅಡ್ಡಲಾಗಿ ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಮಂಡಳಿಯಿಂದ ಅನುಮತಿ ಕೊಡಿಸಬೇಕು. ನದಿಗಳ ಜೋಡಣೆಯಲ್ಲಿ ಗೋದಾವರಿ-ಕಾವೇರಿ, ಬೇಡ್ತಿ-ವರದಾ ಜೋಡಣೆಯ ಯೋಜನೆಯಲ್ಲಿ ಕರ್ನಾಟಕಕ್ಕೆ ಕನಿಷ್ಠ 40 ರಿಂದ 45 ಟಿಎಂಸಿ ನೀರು ಹಂಚಿಕೆಯಾಗುವಂತೆ ಎಚ್ಚರಿಕೆ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ. ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗೆ ಅನುಮೋದನೆ ನೀಡಬೇಕು. 2 ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ಶರಾವತಿ ಪಂಪ್ ಸ್ಟೊರೇಜ್ ಯೋಜನೆಗೆ ಅರಣ್ಯ ಪರಿಷ್ಕರ ಮತ್ತು ವನ್ಯಜೀವಿಗಳ ಪರಿಷತ್ತಿನಿಂದ ಅನುಮೋದನೆ ಕೊಡಿಸಬೇಕು ಎಂದು ಮನವಿ ಮಾಡಿದ್ದಾರೆ.

### ಸಿರವಾರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ಜಯಂತಿ ಆಚರಣೆ: ಶೋಷಿತರ ಬದುಕಿನ ಬೆಳಕು ಈ ಇಬ್ಬರು ಮಹನೀಯರು

**ಬಾಬು ಜಗಜೀವನ್ ರಾಮ್ ಅವರ ಕೊಡುಗೆ:** ಶಿಕ್ಷಕ ಬಲವಂತ ಮಹೇಂದ್ರಕರ್ ಮಾತನಾಡಿ, ಕೇಂದ್ರ ಸಚಿವ ಸಂಪುಟದಲ್ಲಿ ಸತತ 30 ವರ್ಷಗಳ ಕಾಲ ಸೇವೆ ಸಲ್ಲಿಸಿದ ಹೆಗ್ಗಳಿಕೆ ಜಗಜೀವನ್ ರಾಮ್ ಅವರದ್ದು. ಕಾರ್ಮಿಕ ಕಲ್ಯಾಣ ಹಾಗೂ ಕೃಷಿ ಕ್ಷೇತ್ರದಲ್ಲಿ ಅವರು ಕ್ರಾಂತಿಕಾರಿ ಬದಲಾವಣೆ ತಂದರು ಎಂದರು.
ಕಾರ್ಯಕ್ರಮದ ಮುಖ್ಯಾಂಶಗಳು:
**ಅದ್ದೂರಿ ಮೆರವಣಿಗೆ:** ಕಾರ್ಯಕ್ರಮದ ಅಂಗವಾಗಿ ದೇವದುರ್ಗ ಕ್ರಾಸ್‌ನಿಂದ ಬಸ್ ನಿಲ್ದಾಣದವರೆಗೆ ಮಹನೀಯರ ಭಾವಚಿತ್ರಗಳೊಂದಿಗೆ ಭವ್ಯ ಮೆರವಣಿಗೆ ನಡೆಸಲಾಯಿತು.
ಪ್ರತಿಭಾನ್ವಿತರಿಗೆ ಸನ್ಮಾನ: ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು.
ಗಣ್ಯರ ಉಪಸ್ಥಿತಿ:
ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಅಶೋಕ ಪವಾರ್, ಪ.ಪಂ ಅಧ್ಯಕ್ಷ ಹಾಜಿ ಚೌದ್ರಿ, ಉಪಾಧ್ಯಕ್ಷೆ ಲಕ್ಷ್ಮಿ ಅದೆಪ್ಪ, ತಾ.ಪಂ ಇಒ ಶಶಿಧರ್ ಸ್ವಾಮಿ, ಪ್ರಭಾರಿ ಮುಖ್ಯಾಧಿಕಾರಿ ಹಂಪಯ್ಯ ಪಾಟೀಲ್, ಸಿಡಿಪಿಒ ವೆಂಕಟೇಶ್ ದೇಸಾಯಿ ಹಾಗೂ ಸಿಪಿಐ ಶಶಿಕಾಂತ್ ಎಂ ಉಪಸ್ಥಿತರಿದ್ದರು.
ಅಲ್ಲದೆ, ನೀರಾವರಿ ಇಲಾಖೆಯ ಎಇಇ ವಿಜಯಲಕ್ಷ್ಮಿ ಪಾಟೀಲ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಆರೀಫ್ ಮಿಯಾ, ದಲಿತ ಮುಖಂಡರಾದ ಬಡ್ಡ ಹನುಮಂತ, ಸವಾರೆಪ್ಪ, ಅಬ್ರಹಾಂ ಹೊನ್ನಟಗಿ, ಎಂ. ಮನೋಹರ್ ಸೇರಿದಂತೆ ಶಿಕ್ಷಕರು, ಯುವಕರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು

# ರಾಜ್ಯ ಸರ್ಕಾರವು ಉತ್ತಮ ಆಡಳಿತವನ್ನು ನೀಡುವಲ್ಲಿ ವಿಫಲವಾಗಿದೆ:ಬಿ.ವಿ.ನಾಯಕ

ಹಿಂದಿನಿಂದಲೇ ನಿರಂತರವಾಗಿ ಪಕ್ಷವನ್ನು ಸಧೃಡವಾಗಿ ತಳಮಟ್ಟದಿಂದ ಸಂಘಟಿಸಬೇಕಾಗಿದೆ ಎಂದು ತಿಳಿಸಿದರು.
ಬಿ.ಜೆ.ಪಿ. ಮಾನ್ವಿ ಮಂಡಲ ಅಧ್ಯಕ್ಷರಾದ ವೀರಭದ್ರಗೌಡ ಭೋಗಾವತಿ, ಬಿಜೆಪಿ ಪಕ್ಷದ ಸಿರವಾರ ಮಂಡಲ ಅಧ್ಯಕ್ಷರಾದ ಆರ್.ಕೆ.ಅಮರೇಶಪ್ಪ ಸಾಹುಕಾರ, ಶರಣಪ್ಪ ಗೌಡ ನಕ್ಕುಂದಿ, ಮಲ್ಲಿಕಾರ್ಜುನ್ ಜಕ್ಕಲದಿನಿ, ಕೆ.ನಾಗಲಿಂಗ ಸ್ವಾಮಿ, ಶೈಲಜಾ ಷಡಕ್ಷರಪ್ಪ, ಎಂ.ಬಿಬ್ಬನಗೌಡ, ಗುರುಸಿದ್ದಪ್ಪ ಕಣ್ಣೂರು, ಹನುಮೇಶ ನಾಯಕ ಸೇರಿದಂತೆ ಪ್ರಶಿಕ್ಷಣ ಮಹಾಭಿಯಾನ-2026 ಮಂಡಲ ಮಟ್ಟದ ಪ್ರಶಿಕ್ಷಣ ವರ್ಗದಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಭಾಗವಹಿಸಿದರು.

### ಯೋಗೇಶ್ ಗೌಡ ಹತ್ಯೆ ಪ್ರಕರಣ: ಶಾಸಕ ವಿನಯ್ ಕುಲಕರ್ಣಿ ದೋಷಿ

ಈ ಪ್ರಕರಣ ಕುರಿತು ತನಿಖೆ ಕೈಗೊಂಡಿದ ಸಿಬಿಐ ವಿನಯ್ ಕುಲಕರ್ಣಿ ಅವರನ್ನು 15ನೇ ಆರೋಪಿಯನ್ನಾಗಿ ಆರೋಪಪಟ್ಟಿಯಲ್ಲಿ ಉಲ್ಲೇಖಿಸಿತ್ತು.
ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬಳಿಕ 2016ರಲ್ಲಿ ಜಿಲ್ಲಾಪಂಚಾಯತ್ ಸಭಾ ಭವನದಲ್ಲಿ ಸಚಿವ ವಿನಯ್ ಅವರೊಂದಿಗೆ ತೀವ್ರ ಮಾತಿನ ಚಕಮಕಿ ನಡೆದಿತ್ತು.

ಜೂನ್ 15 ರಂದು ಯೋಗೇಶ್ ಗೌಡ ಧಾರವಾಡದ ಸಪ್ತಾಪೂರದ ಉದಯ್ ಜಿಮ್‌ನಲ್ಲಿ ವ್ಯಾಯಾಮ ಮಾಡುತ್ತಿದ್ದಾಗ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು.

# ಮೇ 10 ಹೇಮರಡ್ಡಿ ಮಲ್ಲಮ್ಮ ಜಯಂತಿ ವೀರಶೈವ ಲಿಂಗಾಯತ ರಡ್ಡಿ ಸಂಘ ಪುನರ್ರಚನೆ



**ಬಳ್ಳಾರಿ, ಏ.15:** ಬರುವ ಮೇ 10 ರಂದು ನಗರದಲ್ಲಿ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಭಕ್ತಿಭಾವ, ಸಡಗರ ಸಂಭ್ರಮದಿಂದ ಆಚರಿಸಲು ವೀರಶೈವ ಲಿಂಗಾಯತ ರಡ್ಡಿ ಸಂಘ ನಿರ್ಧರಿಸಿದೆ.

ನಗರದ ಬಸವ ಭವನದಲ್ಲಿ ನಿನ್ನೆ ಸಂಜೆ ಸಭೆ ಸೇರಿದ ಸಂಘದ ಸದಸ್ಯರು, ಮುಖಂಡರು, ಕಳೆದ ಹಲವು ವರ್ಷಗಳಿಂದ ಆಚರಿಸಿಕೊಂಡು ಬರುತ್ತಿರುವ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಕಳೆದ ವರ್ಷದಂತೆ ಜಿಲ್ಲಾಡಳಿತದ ಸಹಕಾರದಿಂದ ವಿಜೃಂಭಣೆಯಿಂದ ಆಚರಿಸಲು ಚರ್ಚಿಸಿದರು.

ಈ ಕುರಿತಂತೆ ಜಿಲ್ಲಾಡಳಿತ ಕರೆಯುವ ಪೂರ್ವ ಸಿದ್ದತಾ ಸಭೆಯಲ್ಲಿ. ಮಲ್ಲಮ್ಮ ಜಯಂತಿ ಸಮಾರಂಭವನ್ನು ನಗರದ ಬಸವ ಭವದಲ್ಲಿ ಅಂದು ಸಂಜೆ ಹಮ್ಮಿಕೊಳ್ಳೋಣ. ಅದಕ್ಕೂ ಮುನ್ನ ಮಲ್ಲಮ್ಮಳ ಭಾವಚಿತ್ರದ ಮೆರವಣಿಗೆಯನ್ನು ದುರ್ಗಮ್ಮ ದೇವಸ್ಥಾನದಿಂದ ಬಸವ ಭವನದ ವರೆಗೆ ಹಮ್ಮಿಕೊಳ್ಳಬೇಕು. ಇದಕ್ಕಾಗಿ ಹಳ್ಳಿಗಳಿಗೆ ತೆರಳಿ ರಡ್ಡಿ ಸಮುದಾಯದ ಜನತೆ ಜಯಂತಿ ಕಾರ್ಯಕ್ರಮಕ್ಕೆ ಬರುವಂತೆ ಕರಪತ್ರ ನೀಡಿ ಆಹ್ವಾನಿಸಲು. ಸಮಾರಂಭದ ನಂತರ ಪ್ರಸಾದ ವ್ಯವಸ್ಥೆ ಮಾಡಲು ತೀರ್ಮಾನಿಸಿತು.

ಉಳಿಸಂತೆ ಉಪನ್ಯಾಸ, ಸನ್ಮಾನ ಮೊದಲಾದವುಗಳ ಬಗ್ಗೆ ಜಿಲ್ಲಾಡಳಿತ ಕರೆಯುವ ಸಭೆಯಲ್ಲಿ ಅಂತಿಮಗೊಳಿಸಲು ನಿರ್ಣಯಿಸಲಾಯ್ತು. ಇದೇ ವೇಳೆ ವೀರಶೈವ ಲಿಂಗಾಯತ ರಡ್ಡಿ ಸಂಘವನ್ನು ಪುನರ್ವರಚಿಸಲು ನಿರ್ಧರಿಸಿ. ಹಳಬರು ಮತ್ತು ಹೊಸಬರನ್ನು ಒಳಗೊಂಡ ಈ ಮುಂದಿನ. 21 ಹೆಸರುಗಳನ್ನು ಅಂತಿಮಗೊಳಿಸಲಾಯ್ತು. ಡಾ ಎಸ್.ಜೆ.ವಿ.ಮಹಿಪಾಲ್, ಎನ್.ಅಯ್ಯಪ್ಪ, ಜೆ.ಎಸ್.ನೇಪಾಕ್ಷಪ್ಪ, ರವಿರಾಜಶೇಖರ ರಡ್ಡಿ, ಜೋಳದರಾಶಿ ಬಸವರಾಜ್, ಟಿ.ವಿರುಪಾಕ್ಷಗೌಡ, ಸಂಗನಕಲ್ಲು ಯುಧಿಷ್ಟರ, ಬಿ.ರವೀಂದ್ರನಾಥ, ಕೆರೆನಳ್ಳಿ ಚಂದ್ರಶೇಖರ, ಅಭಿನಂದನ್ ಪಾಟೀಲ್, ಎನ್ ಚಂದ್ರಶೇಖರ ಯರಂಗಳಿ, ಡಾ.ಭಾಗ್ಯಲಕ್ಷ್ಮಿ, ಟಿ.ಎಂ.ಜಡೇಶ, ಮಿಂಚೇರಿ ನರೇಂದ್ರಬಾಬು, ಸಂಜೀವರಾಯನಕೋಟೆ ಸೋಮನಗೌಡ, ಕೆ.ನಂದೀಶ್ ಕುಮಾರ್, ಬಣಾಪುರ ನಾಗರಾಜ, ಜೆ.ಬಿ.ಸುಮಂಗಳ, ಗೋನಾಳ್ ಮುರಹರಗೌಡ, ಹೆಚ್.ಮಹಾಬಲೇಶ್ವರಗೌಡ, ಹೆಚ್.ವೀರಭದ್ರಗೌಡ ಇವರನ್ನು ಅಂತಿಮಗೊಳಿಸಿದ್ದು. ಇವರಲ್ಲಿ ಪದಾಧಿಕಾರಿಗಳನ್ನು ಕೆಲ ದಿನಗಳಲ್ಲಿ ಆಯ್ಕೆ ಮಾಡಲು ಸೂಚಿಸಿದೆ.

ಇನ್ನು ಮಹಿಳಾ, ಘಟಕ, ಬಳ್ಳಾರಿ ತಾಲೂಕು ಘಟಕ, ಯುವ ಘಟಕಗಳನ್ನು ರಚಿಸುವ ಬಗ್ಗೆಯೂ ಚರ್ಚಿಸಲಾಯ್ತು. ಸಭೆಯಲ್ಲಿ ರಡ್ಡಿ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

# ಲೋಯಲ ಸಮಾಜ ಸೇವಾ ಕೇಂದ್ರದಿಂದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಲೋಯಲ ಸಮಾಜ ಸೇವಾ ಕೇಂದ್ರದ ಅರುಪೆ ಸಭಾಂಗಣದಲ್ಲಿ ಲೋಯಲ ಸಮಾಜ ಸೇವಾ ಕೇಂದ್ರ ಹಾಗೂ ಮಾನವ ಹಕ್ಕುಗಳ ವೇದಿಕೆ ಮಾನವಿ ವತಿಯಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್ ರವರ 135 ನೇ ಜಯಂತಿ ಉತ್ಸವ ಕಾರ್ಯಕ್ರಮವನ್ನು ಡಾ.ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸುವ ಮೂಲಕ ಉದ್ಘಾಟಿಸಿ ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್ ಮಾತನಾಡಿ ವೈವಿಧ್ಯಮಯವಾದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಸಂಸ್ಕೃತಿ, ಪರಂಪರೆ, ಭಾಷೆಯನ್ನು ಹೊಂದಿರುವ ವಿಶೇಷವಾದ ಭಾರತದೇಶಕ್ಕೆ ವಿಶ್ವದಲ್ಲಿಯೇ ಶ್ರೇಷ್ಟವಾದ ಸಂವಿಧಾನವನ್ನು ನೀಡಿದ್ದು ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳಿಗೆ ಸಂವಿಧಾನದ ಕುರಿತು ತಿಳಿಸಿದಾಗ ಮಾತ್ರ ಶಾಂತಿಯುತವಾದ ಸೌಹಾರ್ಧಯುತವಾದ ದೇಶವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.
ತಾ.ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಶಾಹಿರ್ ಭಾನು ನದಾಫ್ ವಿಶೇಷ ಉಪನ್ಯಾಸ ನೀಡಿ ಡಾ.ಬಿ.ಆರ್.ಅಂಬೇಡ್ಕರ್ ರವರು ಜ್ಞಾನವನ್ನು ಗಳಿಸುವ ಶಿಕ್ಷಣಕ್ಕೆ ಹೆಚ್ಚಿನ ಅದ್ಯತೆಯನ್ನು ನೀಡಿದರು. ವಿಶೇಷವಾಗಿ ಮಹಿಳೆಯರು ಕೂಡ ಶಿಕ್ಷಣವಂತರಾಗಬೇಕು ಆಗಮಾತ್ರ ಮಹಿಳೆಯರು ಸ್ವಾವಲಂಬಿಗಳಾಗಿ ಸ್ವತಂತ್ರರಾಗಿ ಬದುಕುವುದಕ್ಕೆ ಹಾಗೂ ಸ್ತ್ರೀಯರಿಗೆ ಸಮಾನತೆ ದೊರೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಪ್ರಬಲವಾಗಿ ನಂಬಿದರು ಅವರು ಸಂವಿಧಾನದ ಮೂಲಕ ದೇಶದ ಪ್ರತಿಯೊಬ್ಬ ಮಹಿಳೆಗೂ ಕೂಡ ಸಮಾನತೆ, ಸಮಾನ ಹಕ್ಕುಗಳು, ಸ್ತ್ರೀಯರಿಗೆ ಮುಕ್ತವಾದ ಸ್ವತಂತ್ರ ??ವನ್ನು ನೀಡಿದ್ದಾರೆ ಅದ್ದರಿಂದ ಪ್ರತಿಯೊಬ್ಬ ಪಾಲಕರು ಕೂಡ ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡುವುದಕ್ಕೆ ಹೆಚ್ಚಿನ ಅದ್ಯತೆಯನ್ನು ನೀಡಿ ಎಂದು ತಿಳಿಸಿದರು.
ಜನೋದಾಯ ರಂಗ ಚೈತನ್ಯ ಕಲಾ ತಂಡದಿಂದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ರಾಮಾಬಾಯಿ ರವರ ಜೀವನ ಕುರಿತು ನಾಟಕ ಪ್ರದರ್ಶನ ನಡೆಯಿತು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ವಿ ಸೇವಾ ಕ್ಷೇತ್ರದ ಮುಖ್ಯಸ್ಥರಾದ ಫಾ.ಸಿಪ್ರಿಯನ್ ಟೆಲ್ಲಿಸ್ ವಹಿಸಿದರು ಉಪತಹಾಸೀಲ್ದಾರ್ ವಿರುಪಣ್ಣ, ಲೋಯಾಲ ಕಾಲೇಜಿನ ಪ್ರಾಚಾರ್ಯರಾದ ಫಾ.ವಿನೋದ್ ಫೌಲ್, ನಿವೃತ್ತ ಶಿಕ್ಷಕಿ ಮಹಿಮೂದ್ ಬೇಗಂ, ಮಿಮುಕ್ತಿ ಚಾರೀಟಬಲ್ ಟ್ರಸ್ಟ್ ಫಾ.ಸತೀಶ್ ಫೆರ್ನಾಂಡಿಸ್, ಜನಶಕ್ತಿ ಒಕ್ಕೂಟದ ಅಧ್ಯಕ್ಷರಾದ ಗಂಗಮ್ಮ, ಜನೋದಯ ಸಂಸ್ಥೆಯ ಸಿಸ್ಟರ್ ಕ್ರಿಸ್ಟಿನ್, ರವೀಂದ್ರ ಜಾನೇಕಲ್, ಚಂದ್ರು, ಶಿವಜ್ಞಾನಿ, ಅಬ್ರಹಂ , ಸದಾನಂದ, ಮಾರೆಪ್ಪ ,ಬಸಪ್ಪ, ಬಸವಲಿಂಗಪ್ಪ,ತಿಮ್ಮಲಮ್ಮ,ಬಸವರಾಜ, ಸೇರಿದಂತೆ ಇನ್ನಿತರರು ಇದ್ದರು.

# ಜಮಖಂಡಿಯಲ್ಲಿ ಪಿಯುಸಿ ಸಾಧಕ ವಿದ್ಯಾರ್ಥಿನಿ ಪ್ರೇರಣಾ ಸಂಜಯ್ ಚಲವಾದಿ ಪಾಲಕರಿಗೆ ಸನ್ಮಾನ



**ಜಮಖಂಡಿ:ಏ.15:** ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಜಮಖಂಡಿಯಲ್ಲಿ ಬಸವ ತತ್ವ ಟ್ರಸ್ಟ್ ವತಿಯಿಂದ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 590 ಅಂಕಗಳನ್ನು ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿನಿ ಕುಮಾರಿ ಪ್ರೇರಣಾ ಸಂಜಯ್ ಚಲವಾದಿ ಅವರ ಪಾಲಕರಿಗೆ ಸನ್ಮಾನಿಸಿ ಗೌರವಿಸಲಾಯಿತು.ಕಾರ್ಯಕ್ರಮದಲ್ಲಿ ಕಸಾಪ ತಾಲೂಕು ಅಧ್ಯಕ್ಷ ಸಂತೋಷ ತಳಕೇರಿ ಮಾತನಾಡಿ, "ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಂತಹ ವಿಶಿಷ್ಟ ಸಾಧನೆ ಸಾಧಿಸುವುದು ದೊಡ್ಡ ವಿಷಯ. ಪ್ರೇರಣಾ ಅವರು ತಮ್ಮ ಪರಿಶ್ರಮ, ಶಿಸ್ತು ಮತ್ತು ಮನೋಬಲದಿಂದ ರಾಜ್ಯ ಮಟ್ಟದಲ್ಲಿ ಹೆಮ್ಮೆ ತರುವ ಸಾಧನೆ ಮಾಡಿದ್ದಾರೆ. ಇಂತಹ ವಿದ್ಯಾರ್ಥಿಗಳು ಸಮಾಜಕ್ಕೆ ಮಾದರಿಯಾಗುತ್ತಾರೆ" ಎಂದರು.

ಸರಕಾರಿ ಶಾಸಕರ ಮಾದರಿ ಶಾಲೆಯ ಮುಖ್ಯೋಪಾಧ್ಯಾಯ ಎ.ಆರ್. ಹೊಸಮನಿ ಮಾತನಾಡಿ, "ಅಂಬೇಡ್ಕರ್ ಅವರ ಶಿಕ್ಷಣದ ತತ್ವಗಳು ಇಂತಹ ಸಾಧನೆಗಳಿಗೆ ಪ್ರೇರಣೆ. ಪ್ರತಿಭಾವಂತರಿಗೆ ಪ್ರೋತ್ಸಾಹ ನೀಡಿದರೆ ಅವರು ಇನ್ನಷ್ಟು ಎತ್ತರಕ್ಕೆ ಏರುತ್ತಾರೆ. ಪ್ರೇರಣಾ ಅವರು ಮುಂದಿನ ದಿನಗಳಲ್ಲಿ ಐಎಎಸ್, ಐಪಿಎಸ್ ಹುದ್ದೆಗಳಲ್ಲಿ ಸಾಧನೆ ಮಾಡಲಿ" ಎಂದು ಹಾರೈಸಿದರು.ಸಾರಿಗೆ ನೌಕರರ ಎಸ್‌ಸಿ/ಎಸ್‌ಟಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಪ್ರಭು ಬಿದರಿ ಮಾತನಾಡಿ, "ಶಿಕ್ಷಣವೇ ಶಕ್ತಿ ಎಂಬ ಅಂಬೇಡ್ಕರ್ ಅವರ ಸಂದೇಶವನ್ನು ಪ್ರೇರಣಾ ಅವರ ಸಾಧನೆ ಸಾಬೀತುಪಡಿಸಿದೆ. ಅವರು ಭವಿಷ್ಯದಲ್ಲಿ ದೇಶ ಸೇವೆಗೆ ತೊಡಗಿಸಿಕೊಳ್ಳಲಿ" ಎಂದರು.

ವಿದ್ಯಾರ್ಥಿನಿಯ ತಂದೆ ಸಂಜಯ್ ಚಲವಾದಿ ಮಾತನಾಡಿ, "ಪ್ರೇರಣಾ ಬಾಲ್ಯದಿಂದಲೇ ಪರಿಶ್ರಮಿ. ಎಲ್‌ಕೆಜಿ ಇಂದಲೇ ಪ್ರಥಮ ಸ್ಥಾನ ಕಾಯ್ದುಕೊಂಡು ಬಂದಿದ್ದಾಳೆ.ಪಿಯುಸಿಯಲ್ಲಿ ಗಣಿತ ಹಾಗೂ ಜೀವ ವಿಜ್ಞಾನದಲ್ಲಿ 100ಕ್ಕೆ 100 ಅಂಕಗಳನ್ನು ಗಳಿಸಿರುವುದು ಹೆಮ್ಮೆ ತಂದಿದೆ. ಅವಳು ಭವಿಷ್ಯದಲ್ಲಿ ಐಎಎಸ್ ಆಗಿ ಸಮಾಜ ಸೇವೆ ಮಾಡುವ ಕನಸು ಹೊಂದಿದ್ದಾಳೆ" ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಶಿಕ್ಷಕರ ಸಂಘದ ನಿರ್ದೇಶಕರು ಅರವಿಂದ ನವನಿ, ಮಹದೇವ ಪೋತರಾಜ, ಜಗದೀಶ ಕಾಂಬಳೆ, ಟಿ.ಎಸ್. ನಾಗರಾಳ, ಶ್ರೀಶೈಲ ಚಲವಾದಿ, ಶ್ರೀಮತಿ ನಿಜವ್ವಾ ಚಲವಾದಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಬೋರ್ಕಲ್ಲುಗುಡ್ಡೆಯಲ್ಲಿ ತೆರೆದ ಬಾವಿಗೆ ಬಿದ್ದಿದ್ದ ಚಿರತೆಯ ರಕ್ಷಣೆ

**ಕಾರ್ಕಳ**-ನಿಟ್ಟೆ ಗ್ರಾಮದ ಬೋರ್ಕಲ್ಲುಗುಡ್ಡೆ ಪ್ರದೇಶದಲ್ಲಿ ಬಾವಿಗೆ ಬಿದ್ದಿದ್ದ ಚಿರತೆಯನ್ನ ರಕ್ಷಿಸಿ ಕಾಡಿಗೆ ಬಿಟ್ಟ ಘಟನೆ ನಿಟ್ಟೆ ಗ್ರಾಮದ ಬೋರ್ಕಲ್ಲುಗುಡ್ಡೆ ಪ್ರದೇಶದಲ್ಲಿ ನಡೆದಿದೆ. ಕರಿಯ ಪೂಜಾರಿ ಎಂಬವರ ಮನೆಯ ಸಮೀಪವಿರುವ ಕೃಷಿ ಹೊಲಗಳಿಗೆ ಬೇಟೆಯನ್ನು ಹುಡುಕುತ್ತಾ ಹೋದ ಚಿರತೆ, ನಂತರ ಆಕಸ್ಮಿಕವಾಗಿ ಮನೆಯ ಸಮೀಪವಿರುವ ತೆರೆದ ಬಾವಿಗೆ ಬಿದ್ದಿದ್ದೆ. ಬೆಳಿಗ್ಗೆ ಸ್ಥಳೀಯ ನಿವಾಸಿಗಳು ಅದನ್ನು ಗಮನಿಸಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಪ್ರತಿಕ್ರಿಯಿಸಿದ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಅಗಮಿಸಿ, ಬಲೆಗಳು ಮತ್ತು ಪಂಜರವನ್ನು ಬಳಸಿ ಚಿರತೆಯನ್ನು ಬಾವಿಯಿಂದ ಸುರಕ್ಷಿತವಾಗಿ ಹೊರತೆಗೆಯಲಾಯಿತು. ಯಾವುದೇ ಗಾಯಗಳಿಲ್ಲದೆ ಚಿರತೆಯನ್ನು ರಕ್ಷಿಸಿ ನಂತರ ಹತ್ತಿರದ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ ಎಂದು ಅಧಿಕಾರಿಗಳು ದೃಢಪಡಿಸಿದರು.ಅರಣ್ಯ ಅಧಿಕಾರಿಗಳು ಆ ಪ್ರಾಣಿಯನ್ನು ಸುಮಾರು ಒಂದು ವರ್ಷದ ಗಂಡು ಚಿರತೆ ಎಂದು ಗುರುತಿಸಿದ್ದಾರೆ.

ಕುಂದಾಪುರ ಉಪ ಅರಣ್ಯ ಸಂರಕ್ಷಣಾಧಿಕಾರಿ ರುದ್ರನ್



ಮತ್ತು ಮೂಡುಬಿದಿರೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪಿ. ಶ್ರೀಧರ್ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆಸಲಾಯಿತು. ರಕ್ಷಣಾ ತಂಡದಲ್ಲಿ ಕಾರ್ಕಳ ವಲಯ ಉಪ ಅರಣ್ಯಾಧಿಕಾರಿ ಹುಕ್ರಪ್ಪ ನೇತೃತ್ವದ ಸಿಬ್ಬಂದಿ, ಚಂದ್ರಕಾಂತ್, ಕರುಣಾಕರ್, ಅರಣ್ಯ ರಕ್ಷಕರಾದ ಸುರೇಶ್, ಪ್ರಕಾಶ್, ಶ್ರೀಧರ್, ಯಮನೂರ್, ಅರಣ್ಯ ವೀಕ್ಷಕ ಮಂಜುನಾಥ್, ಚಾಲಕ ವಿತೇಶ್ ಮತ್ತು ಇತರ ಸಿಬ್ಬಂದಿ ಇದ್ದರು, ಸ್ಥಳೀಯ ನಿವಾಸಿಗಳ ಸಹಕಾರದೊಂದಿಗೆ ಈ ಕಾರ್ಯಾಚರಣೆ ನಡೆಸಿದ್ದಾರೆ.

ಧೈರ್ಯದ ದಾರಿ

ಗುರುವಾರ: 16-04-2026

# ಉಸ್ತಾದ್ ಆಸ್ಪತ್ರೆಯಲ್ಲಿ "ಸುರಕ್ಷಿತ ಶಾಲೆ ಆಸ್ಪತ್ರೆ- ಅಗ್ನಿ ಮುಂಜಾಗ್ರತೆಗಾಗಿ ಒಂದಾಗಿ" ಸಪ್ತಾಹ



**ಕಲಬುರಗಿ,ಏ.15–** ಅಗ್ನಿನಂದಕಗಳನ್ನು ಕ್ರಮಬದ್ಧವಾಗಿ ಬಳಸುವ ವಿಧಾನಗಳನ್ನು ಆಸ್ಪತ್ರೆಯ ಸಿಬ್ಬಂದಿಗಳಿಗೆ ಕಲಿಸಿಕೊಡುವುದು ಮತ್ತು ಅಗ್ನಿ ಅವಘಡದ ತುರ್ತು ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತೆ ಮತ್ತು ಸುರಕ್ಷತ ಕ್ರಮಗಳ ಕುರಿತು ಜಾಗೃತಿ ಮೂಡಿಸಲು ಅಗ್ನಿಶಾಮಕ ಇಲಾಖೆ ಕಾಲಕಾಲಕ್ಕೆ ಕಾರ್ಯಕ್ರಮಗನ್ನು ಆಯೋಜಿಸಲಾಗುತ್ತಿದೆ ಎಂದು ಕಲಬುರಗಿ ಜಿಲ್ಲಾ ಅಗ್ನಿ ಶಾಮಕ ಠಾಣೆಯ ಅಧಿಕಾರಿ ಪ್ರವೀಣ ಎಂ.ಕೆ ಅವರು ಹೇಳಿದರು.

ಶಾಂತಿ ನಗರದ ಉಸ್ತಾದ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಆಶ್ರಯದಲ್ಲಿ ಮಂಗಳವಾರ ಏ.14ರಂದು ಆಯೋಜಿಸಿದ್ದ " ಸುರಕ್ಷತ ಶಾಲೆ, ಆಸ್ಪತ್ರೆ ಮತ್ತು ಅಗ್ನಿ ಸುರಕ್ಷತೆಯ ಅರಿವುಳ್ಳ ಸಮಾಜ– ಅಗ್ನಿ ಮುಂಜಾಗ್ರತೆಗಾಗಿ ಒಂದಾಗಿ" ಎಂಬ ಘೋಷವ್ಯಕ್ಯದ  ಜಾಗ್ರತಿ ಸಪ್ತಾಹ ಕಾರ್ಯಕ್ರಮಕ್ಕೆ ಅವರು, ಚಾಲನೆ ನೀಡಿ ಮಾತನಾಡಿದರು.

ಆಸ್ಪತ್ರೆಯ ಎಲ್ಲ ಮಹಡಿಗಳಲ್ಲಿ ಅಳವಡಿಸಲಾಗಿರುವ ಅಗ್ನಿನಂದಕಗಳನ್ನು ಯಾವರೀತಿಯಾಗಿ ಬಳಸಬೇಕು, ಅಗ್ನಿಅವಘಡದ ತುರ್ತು ಸಂದರ್ಭಗಳಲ್ಲಿ ಲಿಫ್ಟ್ ಬಳಸದೇ, ಒಳ ರೋಗಿಗಳನ್ನು ಸುರಕ್ಷತಾ ಸ್ಥಳಗಳಿಗೆ ಯಾವರೀತಿ ಸಾಗಿಸಬೇಕು, ಅಗ್ನಿದುರಂತದ ಸಂಧರ್ಭದಲ್ಲಿ ಮೆಟ್ಟಿಲುಗಳ ಸಹಾಯದಿಂದ ಕೆಳಮುಖವಾಗಿ ಹೊರಬರಬೇಕು, ಅಲ್ಲದೇ ಬೆಂಕಿಬೆಂಕಿ  ಬೆಂಕಿ ಎಂದು ಕೂಗುತ್ತ ಸಾಗುವುದು ಅತಿಮುಖ್ಯವಾಗಿರುತ್ತದೆ ಇದರಿಂದ ಉಳಿದವರು ಜಾಗೃತಗೊಂಡು ತಮ್ಮನ್ನು ಹಿಂಬಾಲಿಸುವ ಮೂಲಕ ಸುರಕ್ಷಿತ ಸ್ಥಳಕ್ಕೆ ತಲುಪಲು ಸಾದ್ಯವಾಗುತ್ತದೆ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಸ್ಪತ್ರೆಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಡಾ.ತನ್ವೀರ ಹುಸೇನ ಉಸ್ತಾದ ಅವರು, ಮಾತನಾಡಿ ಬಹಮಹಾಡಿ ಈ ಆಸ್ಪತ್ರೆಯಲ್ಲಿ ವೈಜ್ಞಾನಿಕ ತಂತ್ರಜ್ಞಾನದ ಅಗ್ನಿ ನಂದಕಗಳನ್ನು ಎನ್.ಎ.ಬಿ.ಎಚ್ ಸಂಸ್ಥೆಯ ಮಾರ್ಗ ಸೂಚಿಯಂತೆ ಮತ್ತು ಅಗ್ನಿ ಶಾಮಕ ಠಾಣೆಯ ಅಧಿಕಾರಿ ಪ್ರವೀಣ ಅವರ ಸಹಕಾರದಲ್ಲಿ ಅಳವಡಿಸಲಾಗಿದ್ದು, ಆಸ್ಪತ್ರೆಯ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಅಗ್ನಿ ನಂದಕ ಬಳಕೆಗಳ ಕುರಿತು ಮಾರ್ಗದರ್ಶನ ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಎ.ಬಿ.ಸಿ ಮತ್ತು ಡಿ ಶ್ರೇಣಿಯ ನಾಲ್ಕು ಬಣ್ಣಗಳ ಅಗ್ನಿನಂದಕಗಳನ್ನು ಪ್ರತ್ಯೇಕ್ಷಿಕೆಗಳ ಮೂಲಕ ಅದರ ಬಳಕೆಯ ಕುರಿತು ತರಬೇತಿಯನ್ನು ಸಿಬ್ಬಂದಿಗಳಿಗೆ ನೀಡಲಾಯಿತು. ಅಗ್ನಿದುರಂತದಲ್ಲಿ ನಡೆದುಕೊಂಡು ಹೊರ ಹೋಗಲು ಸಾಧ್ಯವಿಲ್ಲದ ಒಳರೋಗಿಳನ್ನು ಯಾವರೀತಿಯಾಗಿ ಅವರೆಲ್ಲರನ್ನು ಸುಕ್ಷಿತ ಸ್ಥಳಕ್ಕೆ ಸಾಗಿಸುವ ವಿವಿಧ ಬಗೆಯ ವಿಧಾನವನ್ನು ಸಹ ಪ್ರತ್ಯೇಕ್ಷಿಕೆಯ ಮೂಲಕ ಮಾಡಿ ತೋರಿಸಲಾಯಿತು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ನಿರ್ದೇಶಕಿ ಡಾ.ಸೈಯಿದಾ ಸುಬಿಯಾ ತನ್ವೀರ, ಡಾ.ಮಹ್ಮದ ಅಬ್ದುಲ ರಜಾಕ ಮಡಕಿ, ಡಾ.ಇರ್ಫಾನ ವಾರಿಸ್, ಡಾ.ಅನ್ನು ಚವ್ಹಾಣ, ಅಗ್ನಿ ಶಾಮಕ ಠಾಣೆಯ ಸಿಬ್ಬಂದಿಗಳಾದ ಮಹಾದೇವ, ಹೊನ್ನಪ್ಪ, ಮಿರಾಜ ಮತ್ತು ಆಸ್ಪತ್ರೆಯ ಸನಾ ಬೇಗಂ, ಫಯಾಜ್, ಸಾಬೇರ ಅಹ್ಮದ ಪಟೇಲ, ಯೋಗೇಶ ಮಾಲಿಪಾಟೀಲ, ಸಾದಿಯಾ, ಸೈಯಿದ ಅರ್ಪಾ, ಅಕ್ಸಾ, ಆದಿಲ್, ಉದಯ ಕುಲಕರ್ಣಿ, ರೇವಣಸಿದ್ದಪ್ಪ, ಸೈಫನ ಪಟೇಲ, ಇರ್ಫಾನ ಅಲಿ ಬೊನ್ಸರ್, ಅಶ್ವಿನಿ, ಅರ್ಚನಾ, ಪ್ರೇಮಾ, ಡಾ.ಆಯೆಶಾ, ಫರಹೀನ್, ರಖಿಬ್, ಕೋಮಲ, ಕವಿತಾ, ಸವಿತಾ, ತಂಜಿಲಾ, ಇರ್ಫಾನ, ಅಸದ, ಯಾಸೀನ, ಸಮೀನ, ಜಯಶ್ರೀ, ಅಂಬರೇಷ, ಕರೀಮ, ಯಾಸ್ಮೀನ ಸೇರಿದಂತೆ ವೈದ್ಯಕೀಯ ಸಿಬ್ಬಂದಿಗಳು, ವೈದ್ಯಕೀಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಕಾಂಗ್ರೆಸ್‌ನಿಂದ ಅಬ್ದುಲ್ ಜಬ್ಬಾರ್ ಅಮಾನತು



**ಬೆಂಗಳೂರು, ಏ. 15–** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯ ವಿರುದ್ಧ ಕೆಲಸ ಮಾಡಿದ್ದ ವಿಧಾನ ಪರಿಷತ್ ಸದಸ್ಯರಾದ ಅಬ್ದುಲ್ ಜಬ್ಬಾರ್ ಅವರನ್ನು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ತಕ್ಷಣದಿಂದಲೇ ಅನ್ವಯವಾಗುವಂತೆ ಅಮಾನತು ಮಾಡಲಾಗಿದೆ

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಅಬ್ದುಲ್ ಜಬ್ಬಾರ್, ನಜೀರ್ ಅಹ್ಮದ್, ಸಚಿವ ಜಮೀರ್ ಅಹ್ಮದ್ ಖಾನ್ ಅವರು ಪಕ್ಷ ವಿರೋಧಿ ಕೆಲಸ ಮಾಡಿದ್ದಾರೆ ಎಂದು ಕಾಂಗ್ರೆಸ್ ಹೈಕಮಾಂಡ್‌ಗೆ ದೂರು ನೀಡಲಾಗಿತ್ತು. ಈ ದೂರನ್ನು ಗಂಭೀರವಾಗಿ ಪರಿಗಣಿಸಿದ ಹೈಕಮಾಂಡ್ ಅಬ್ದುಲ್ ಜಬ್ಬಾರ್ ಅವರಿಗೆ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮಿ ನೀಡುವಂತೆ ಸೂಚಿಸಿತ್ತು. ಅದರಂತೆ ಅಬ್ದುಲ್ ಜಬ್ಬಾರ್ ರಾಜೀನಾಮೆ ಸಲ್ಲಿಸಿದ್ದರು.

ಈಗ ಅಬ್ದುಲ್ ಜಬ್ಬಾರ್ ಅವರನ್ನು ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವದಿಂದಲೇ ಅಮಾನತು ಮಾಡಿ, ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ಈ ನಿರ್ಧಾರವೂ ಪಕ್ಷದ ಶಿಸ್ತಿನ ಪಾಲನೆ ಮತ್ತು ಸಂಘಟನಾ ಬಲವನ್ನು ಕಾಪಾಡುವ ಉದ್ದೇಶದಿಂದ ಕೈಗೊಳ್ಳಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಚುನಾವಣೆಯಲ್ಲಿ ಪಕ್ಷ ವಿರೋಧಿಯಾಗಿ ನಡೆದುಕೊಂಡಿದ್ದ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿದ್ದ ನಜೀರ್ ಅಹ್ಮದ್ ಅವರನ್ನು ನಿನ್ನೆಯಷ್ಟೇ ಹುದ್ದೆಯಿಂದ ವಜಾಗೊಳಿಸಲಾಗಿತ್ತು.

# "ಸಂಶೋಧನಾ ವಿಧಾನ ಮತ್ತು ಶೈಕ್ಷಣಿಕ ಬರವಣಿಗೆ" ಕುರಿತು ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ



**ಕಲಬುರಗಿ,ಏ.15–**ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗವು ಏಪ್ರಿಲ್ 17 ಮತ್ತು 18 ರಂದು ಸಿಯುಕೆಯ ತರಗತಿ ಸಂಕೀರ್ಣದ "ಸಂಶೋಧನಾ ವಿಧಾನ ಮತ್ತು ಶೈಕ್ಷಣಿಕ ಬರವಣಿಗೆ" ಕುರಿತು ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಿತ್ತು.

ಕರಪತ್ರವನ್ನು ಬಿಡುಗಡೆ ಮಾಡಿದ ಕುಲಪತಿ ಪ್ರೆ. ಬಟ್ಟು ಸತ್ಯನಾರಾಯಣ ಅವರು ಮಾತನಾಡುತ್ತ, ಮಾನವಶಾಸ್ತ್ರ ಮತ್ತು ಭಾಷೆಗಳಲ್ಲಿನ ಸಂಶೋಧನೆಯು ಸಾಂಸ್ಕೃತಿಕ ತಿಳುವಳಿಕೆ, ವಿಮರ್ಶಾತ್ಮಕ ವಿಚಾರಣೆ ಮತ್ತು ಮಾನವಿಕ ಜ್ಞಾನ ಉತ್ಪಾದನೆಯ ಬೌದ್ಧಿಕ ಮೂಲಾಧಾರವಾಗಿದೆ. ವಿದ್ಯಾರ್ಥಿಗಳು ಮತ್ತು ಸಂಶೋಧಕರು ತಮ್ಮ ವಿಷಯಗಳ ಬಗ್ಗೆ ಮತ್ತು ಸಂಶೋಧನಾ ವಿಧಾನ ಮತ್ತು ಶೈಕ್ಷಣಿಕ ಬರವಣಿಗೆಯಲ್ಲಿ ಅವರ ತರಬೇತಿಯಲ್ಲಿ ಉತ್ಸಾಹವನ್ನು ಹೊಂದಿರುತ್ತಾರೆ ಎಂದು ಹೇಳಿದರು.

ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಪ್ರೊ. ಬಸವರಾಜ ಡೋಣೂರ ಮಾತನಾಡಿ, ಮಾನವಶಾಸ್ತ್ರದಲ್ಲಿನ ಸಂಶೋಧನಾ ವಿಧಾನವು ಏಕಶಿಲೆಯ ಶಿಸ್ತಲ್ಲ; ಆದಾಗ್ಯೂ, ಇದು ವ್ಯಾಖ್ಯಾನಾತ್ಮಕ, ವಿಮರ್ಶಾತ್ಮಕ, ಪ್ರಾಯೋಗಿಕ ಮತ್ತು ಮಿಶ್ರ ಚೌಕಟ್ಟುಗಳನ್ನು ಆಧರಿಸಿದೆ ಎಂದು ಹೇಳಿದರು.

ಶೈಕ್ಷಣಿಕ ಬರವಣಿಗೆಯಲ್ಲಿ ವಾದ ರಚನೆ, ಶಿಸ್ತಿನ ಸಂಪ್ರದಾಯಗಳು, ಉಲ್ಲೇಖದ ಪೂಟೋಕಾಗಳು ಮತ್ತು ಪ್ರಕಟಣೆಯ ಮಾನದಂಡಗಳ ಮೇಲೆ ಹಿಡಿತ ಸಾಧಿಸುವುದು ಅಗತ್ಯವಾಗಿದೆ. ಈ ಕ್ಷೇತ್ರಗಳಲ್ಲಿ ರಚನಾತ್ಮಕ, ಶಿಸ್ತು–ಸೂಕ್ಷ್ಮ ತರಬೇತಿಯ ಅನುಪಸ್ಥಿತಿಯು ಡಾಕ್ಟರೇಟ್ ಪ್ರಬಂಧಗಳ ಗುಣಮಟ್ಟ, ಸಂಶೋಧನೆ ಪೂರ್ಣಗೊಳ್ಳುವ ವೇಗ ಮತ್ತು ವಿದ್ವತ್ಪೂರ್ಣ ಪ್ರಕಟಣೆಯ ನಿರೀಕ್ಷೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಡೀನ್ ಪ್ರೊಫೆಸರ್ ವಿಕ್ರಮ್ ವಿಸಾಜಿ ಹೇಳಿದರು.

ಕರಪತ್ರ ಬಿಡುಗಡೆ ಸಮಾರಂಭದಲ್ಲಿ ಸಂಘಟನಾ ಕಾರ್ಯದರ್ಶಿ ಶ್ರೀ ಮಹೇಂದ್ರ ಎಂ, ಪ್ರೊ. ಪಾಂಡಾ, ಡಾ. ರೇಣುಕಾ, ಡಾ. ಪ್ರಕಾಶ, ಡಾ. ಆಶಿಶ ಉಪಸ್ಥಿತರಿದ್ದರು. ಎರಡು ದಿನಗಳ ಕಾರ್ಯಾಗಾರದಲ್ಲಿ ಇಈಐಗ ವಿಶ್ವವಿದ್ಯಾಲಯ, ಹೈದರಾಬಾದ ದಿಂದ ಆಹ್ವಾನಿಸಲ್ಪಟ್ಟ ಸಂಪನ್ಮೂಲ ವ್ಯಕ್ತಿಗಳಾದ ಪ್ರೊ. ತಾರಕೇಶ್ವರ್ ವಿ.ಬಿ ಮತ್ತು ಪ್ರೊ. ನಿಖಿಲಾ ಎಚ್. ಎಂಬ ಸಂಶೋಧನಾ ವಿಧಾನ, ಪರಿಕಲ್ಪನೆಗಳು ಮತ್ತು ಮಾದರಿಗಳು, ಸಂಶೋಧನಾ ವಿನ್ಯಾಸ: ಸಮಸ್ಯೆಗಳು, ಶೈಕ್ಷಣಿಕ ಬರವಣಿಗೆ, ಪ್ರಕಟಣೆ ನೀತಿಶಾಸ್ತ್ರ, ಕೃತಿಚೌರ್ಯ ಮತ್ತು ಉಲ್ಲೇಖ ಶೈಲಿಗಳು ಇತ್ಯಾದಿಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

# ಹಗರಿಗೆ ನೀರು ಬಿಡಿಸಲು ಜಿಲ್ಲಾಡಳಿತಕ್ಕೆ ಮನವಿ



**ಬಳ್ಳಾರಿ, ಏ.15:** ತುಂಗಭದ್ರ ಜಲಾಶಯದಿಂದ ಬೇಸಿಗೆ ಬೆಳೆಗೆ ನೀರು ಇಲ್ಲದೆ ಕುಡಿಯುವ ನೀರಿನ ಕೆರೆಗಳು, ಹಳ್ಳಗಳು, ಬಾವಿಗಳು ಬೋರ್ವೆಲ್ಗಳು ಹಗರಿ (ವೇದಾವತಿ ನದಿ) ನೀರಿಲ್ಲದೆ ಬತ್ತಿಹೋಗಿ ಜನರಿಗೂ ಮತ್ತು ಜಾನುವಾರುಗಳಿಗೆ ನೀರಿನ ಸಮಸ್ಯೆಯಾಗುತ್ತಿದೆ.

ಕುಡಿಯುವ ನೀರಿಗಾಗಿ ತುಂಗಭದ್ರ ಜಲಾಶಯದ ಬಲದಂಡೆಯ ಕೆಳ ಮಟ್ಟದ ಕಾಲುವೆಗೆ (ಎಲ್.ಎಲ್.ಸಿ) ನೀರು ಬಿಡಲಾಗಿದೆ. ಈ ನೀರಿನ್ನು ಕುಡಿಯುವ ನೀರಿನ ಕೆರೆಗಳಿಗೆ ಗ್ರಾಮಪಂಚಾಯಿತಿಗಳು ತುಂಬಿಸುತ್ತಿದ್ದಾರೆ. ಆದರೆ ಹಗರಿ (ವೇದಾವತಿ ನದಿ)ಯ ಪಕ್ಕದ ಹಳ್ಳಿಗಳ ರೈತರಿಗೆ ಈ ನೀರು ಲಭ್ಯವಿಲ್ಲ. ಹಾಗಾಗಿ ಬಳ್ಳಾರಿ ಗ್ರಾಮೀಣ ಭಾಗದ ಬರದನಹಳ್ಳಿ, ಮೋಕಾ, ಗೋಟೂರು, ಬಾಣಾಪುರ, ಬೆಣಕಲ್ಲು, ಕರ್ಛೇಡು. ಹೊಣೆನೂರು, ಯರಗುಡಿ, ಬಸರಕೋಡು, ಹದ್ದಿಗಿ, ತಾಳೂರು, ಉಳೂರು, ಉತ್ತನೂರು, ಮಾಟಸೂಗುರು, ಕೂರಿಗನೂರು, ಬೂದುಗುವ, ಮೈಲಾಪುರ, ಬಲಕುಂದಿ, ಹಳ್ಳಿಗನೂರು, ಚಾಣುಕ್ಯನೂರು, ರಾರಾವಿ, ಕರ್ಚಿಗನೂರು, ಬಾಗೇವಾಡಿ, ಕುಡದರಹಾಳು, ಶ್ರೀಧರಗಡ್ಡೆ ಮೊದಲಾದ ಗ್ರಾಮಗಳಿಗೆ ನೀರು ದೊರೆಯುತ್ತಿಲ್ಲ.

ಅದಕ್ಕಾಗಿ ಮೋಕಾ ಗ್ರಾಮದ ಹತ್ತಿರ, ಹಗರಿ (ವೇದಾವತಿ ನದಿ)ಗೆ ನೀರು ಬಿಟ್ಟರೆ ಈ ಹಳ್ಳಿಗಳಿಗೆನೀರು ದೊರೆಯಲಿದೆ.

ಅದಕ್ಕಾಗಿ ತಕ್ಷಣ ಜಲಸಂಪನ್ಮೂಲ ಇಲಾಖೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆದು ಮೋಕಾ ಗ್ರಾಮದ ಹತ್ತಿರ, ಎಲ್.ಎಲ್.ಸಿ ಕಾಲುವೆಯಿಂದ ಹಗರಿ (ವೇದಾವತಿ ನದಿ)ಗೆ ನೀರು ಬಿಡಿಸಬೇಕೆಂದು ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ, ತುಂಗಭದ್ರ ರೈತ ಸಂಘದ ಅಧ್ಯಕ್ಷ ದರೂರು ಪುರುಷೋತ್ತಮಗೌಡ ಜಿಲ್ಲಾಧಿಕಾರಿ ಕೆ.ನಾಗೇಂದ್ರ ಪ್ರಸಾದ್ ಅವರಿಗೆ ಇಂದು ಮನವಿ ಸಲ್ಲಿಸಿದ್ದಾರೆ.

# ಕೊರ್ಲಗುಂದಿಯಲ್ಲಿ ಎನ್.ಎಸ್.ಎಸ್ ವಿಶೇಷ ಶಿಬಿರಕ್ಕೆ ಚಾಲನೆ: ವಿದ್ಯಾರ್ಥಿನಿಯರಲ್ಲಿ ಸೇವಾ ಮನೋಭಾವ ಬೆಳೆಸುವ ಸಂಕಲ್ಪ




**ಬಳ್ಳಾರಿ, ಏ.15:** ನಗರದ ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯದ ಎನ್.ಎಸ್.ಎಸ್ ಘಟಕ 1 ಮತ್ತು ಘಟಕ 2ರ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿನ ವಾರ್ಷಿಕ ವಿಶೇಷ ಶಿಬಿರವನ್ನು ಏಪ್ರಿಲ್ 15ರಿಂದ 21ರವರೆಗೆ ಕೊರ್ಲಗುಂದಿ ಗ್ರಾಮದಲ್ಲಿ ಆಯೋಜಿಸಲಾಗಿದ್ದು, ಇಂದು ಬುಧವಾರ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷೆ ಶ್ರೀಮತಿ ಕಾತ್ಯಾಯಿನಿ ಎಂ. ಮರಿದೇವಯ್ಯ ನೆರವೇರಿಸಿ, ಮಹಾತ್ಮ ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಧ್ವಜಾರೋಹಣ ಮಾಡುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಎನ್.ಎಸ್.ಎಸ್ ಸ್ವಯಂಸೇವಕಿಯರು ಗೀತೆಯನ್ನು ಸಮೂಹವಾಗಿ ಹಾಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೂಪಂ ಸತೀಶ ಅವರು ಮಾತನಾಡಿ, "ವಿದ್ಯಾರ್ಥಿನಿಯರು ಎನ್.ಎಸ್.ಎಸ್ ಮೂಲಕ ನಿಸ್ವಾರ್ಥ ಸೇವಾ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಅವರ ವಿದ್ಯಾರ್ಥಿ ಜೀವನ ಸಾರ್ಥಕವಾಗುತ್ತದೆ" ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಕಾತ್ಯಾಯಿನಿ ಎಂ. ಮರಿದೇವಯ್ಯ ಅವರು ಎನ್.ಎಸ್.ಎಸ್ ಇತಿಹಾಸವನ್ನು ಸ್ಮರಿಸಿ, "1969ರ ಸೆಪ್ಟೆಂಬರ್ 24ರಂದು ಡಾ. ವಿ.ಕೆ.ಆರ್.ವಿ ರಾವ್ ಅವರಿಂದ ರಾಷ್ಟ್ರೀಯ ಸೇವಾ ಯೋಜನೆ ಆರಂಭಗೊಂಡಿತು. ಎನ್.ಎಸ್.ಎಸ್ ಚಿಹ್ನೆಯಲ್ಲಿನ ಕೆಂಪು, ಬಿಳಿ ಮತ್ತು ನೀಲಿ ಬಣ್ಣಗಳು ಕ್ರಮವಾಗಿ ತ್ಯಾಗ, ಶಾಂತಿ ಹಾಗೂ ಸಮೃದ್ಧಿಯನ್ನು ಪ್ರತಿನಿಧಿಸುತ್ತವೆ. ಈ ಮೌಲ್ಯಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿನಿಯೂ ಜೀವನದಲ್ಲಿ ಅಳವಡಿಸಿಕೊಂಡು ದೇಶ ನಿರ್ಮಾಣದಲ್ಲಿ ಪಾಲ್ಗೊಳ್ಳಬೇಕು" ಎಂದು ಕರೆ ನೀಡಿದರು.

ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ವಿಜಯೇಂದ್ರ ರಂಗ ಪ್ರಸಾದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಎನ್.ಎಸ್.ಎಸ್ ಚಟುವಟಿಕೆಗಳ ಮೂಲಕ ವಿದ್ಯಾರ್ಥಿನಿಯರಲ್ಲಿ ವ್ಯಕ್ತಿತ್ವ ವಿಕಾಸ, ನಾಯಕತ್ವ ಗುಣ, ಹೊಂದಾಣಿಕೆ ಮನೋಭಾವ, ಪ್ರಜಾಸತ್ತಾತ್ಮಕ ಚಿಂತನೆ ಹಾಗೂ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಐಕ್ಯೂಎಸಿ ಸಂಯೋಜಕಿ ಡಾ. ಸೈದಾ ಕೆ. ತನ್ವೀರ್, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಜಿ. ಅಶೋಕ, ವಾಣಿಜ್ಯ ಶಾಸ್ತ್ರ ವಿಭಾಗದ ಉಪನ್ಯಾಸಕಿಯರಾದ ಡಾ. ಕೆ. ಅನುಪಮಾ ಮತ್ತು ಕೆ. ಮಮತಾ, ಸಸ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಬಸವರಾಜೇಶ್ವರಿ ಹೆಚ್, ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಸುವರ್ಣಮ್ಮ ಡಿ, ಉಪನ್ಯಾಸಕಿ ಡಾ. ಮಂಗಳ ಬಿ.ಎನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಎನ್.ಎಸ್.ಎಸ್ ಸ್ವಯಂಸೇವಕಿ ರಾಜೇಶ್ವರಿ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿ ಚೈತನ್ಯ ಕಾರ್ಯಕ್ರಮವನ್ನು ನಿರೂಪಿಸಿದರು. ಸಹ ಕಾರ್ಯದರ್ಶಿ ಅನುಷಾ ವಂದಿಸಿದರು.

ಇದಾದ ಬಳಿಕ ಗಣ್ಯರು ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಸಂದೇಶ ನೀಡಿದರು. ನಂತರ ವಿದ್ಯಾರ್ಥಿನಿಯರು, ಅಧ್ಯಾಪಕರು ಹಾಗೂ ಎನ್.ಎಸ್.ಎಸ್ ಅಧಿಕಾರಿಗಳು ಕೊರ್ಲಗುಂದಿ ಗ್ರಾಮದಲ್ಲಿ ಜಾಥಾ ನಡೆಸಿ, ಘೋಷಣೆಗಳ ಮೂಲಕ ಶಿಕ್ಷಣದ ಮಹತ್ವ, ಆರೋಗ್ಯ ಮತ್ತು ಪರಿಸರ ಸಂರಕ್ಷಣೆ ಕುರಿತು ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಿದರು.

ಸಾಮಾಜಿಕ ಬದ್ಧತೆ ಮತ್ತು ರಾಷ್ಟ್ರಸೇವೆಯ ಮನೋಭಾವವನ್ನು ವಿದ್ಯಾರ್ಥಿನಿಯರಲ್ಲಿ ಬೆಳೆಸುವ ಉದ್ದೇಶದಿಂದ ಆಯೋಜಿಸಿದ ಶಿಬಿರದ ಮೊದಲ ದಿನದ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626

# ಬಳ್ಳಾರಿ ಕೆಐಎಡಿಬಿ ಕಚೇರಿಯಲ್ಲಿ 16 ಕೋಟಿ ರೂ ವಂಚನೆ ಪ್ರಕರಣ ಆರೋಪಿ ಸಂತೋಷ್ ಪೊಲೀಸ್ ವಶಕ್ಕೆ

**ಬಳ್ಳಾರಿ, ಏ.15:** ಇಲ್ಲಿನ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವಲಯ ಕಚೇರಿಯಲ್ಲಿ 16.17 ಕೋಟಿ ರೂ ಅವ್ಯವಹಾರ ಮಾಡಿದ್ದ ಆರೋಪದಡಿ ಹುಡುಕುತ್ತಿದ್ದ ಪ್ರಮುಖ ಆರೋಪಿ ಕೆಆರ್ ಎಸ್ ಪಕ್ಷದಲ್ಲಿದ್ದ ಸಂತೋಷ್ ಹೆಚ್. ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.


ಹೆಚ್.ವಿ.ಸಂತೋಷ್ ಕುಮಾರ್

ಜಾಮೀನುಗಾಗಿ ಪ್ರಯತ್ನಿಸುತ್ತಿದ್ದ ಸಂತೋಷ್ ಇಷ್ಟು ದಿನ ತಲೆ ಮರೆಸಿಕೊಂಡಿದ್ದ. ಆದರೆ ಪೊಲೀಸರು ಬಲೆ ಬೀಸು ನಿನ್ನೆ ವಶಕ್ಕೆ ಪಡೆದಿದ್ದಾರಂತೆ.ಈ ಪ್ರಕರಣ 15 ಕೋಟಿ ರೂಗೂ ಹೆಚ್ಚು ಅಗಿರುವುದರಿಂದ ಸಿಐಡಿ ತನಿಖೆಗೆ ನೀಡಲಾಗುವುದೆಂದು ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಹೇಳಿದ್ದರು. ಸಧ್ಯ ಎಪಿಎಂಸಿ ಠಾಣೆಯ ಪೊಲೀಸರು ಈತನನ್ನು ವಶಕ್ಕೆ ಪಡೆದಿದ್ದಾರಂತೆ.

ಕೆಐಡಿಬಿ ಕಚೇರಿಯಲ್ಲಿ ಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಿದ್ದ ಸಂತೋಷ್ ಕುಮಾರ್, ಕಳೆದ 2022ರ ಅಕ್ಟೋಬರ್ 15 ರಿಂದ 2026ರ ಫೆಬ್ರವರಿ 20 ರವರೆಗೆ ಇಲಾಖೆಗೆ ಸಂಬಂಧಿಸಿದ ಬ್ಯಾಂಕ್ ಖಾತೆಯಿಂದ ಹಣವನ್ನು ಹಂತ ಹಂತವಾಗಿ ಇತರರ ಖಾತೆಗಳಿಗೆ ವರ್ಗಾವಣೆ ಮಾಡಿ ನಂತರ ಆತನ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದಾನೆಂದು ಕೆಐಡಿಬಿ ಬಳ್ಳಾರಿ ವಲಯ ಕಚೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಎಸ್.ಎಂ. ಕೊಳಲಗಿ ದೂರು ನೀಡಿದ್ದರು.

ಸಂತೋಷ್ ಕುಮಾರ್ ಇಲಾಖೆಗೆ ಸಂಬಂಧಿಸಿದ ಚೆಕ್ಗಳ ಮೇಲೆ ಮೇಲಾಧಿಕಾರಿಗಳ ನಕಲಿ ಸಹಿ ಹಾಗೂ ಕಚೇರಿಯ ಮುದ್ರೆಯನ್ನು ಹಾಕಿ ಹಣ ವರ್ಗಾವಣೆ ಮಾಡಿಸಿಕೊಂಡಿದ್ದ.ಕಚೇರಿಯಲ್ಲಿ ಕಾಣದಾಗಿದ್ದ ನಿರ್ಧಿಷ್ಟ ಚೆಕ್ಗಳನ್ನು ನಗದೀಕರಿಸದಂತೆ ಬ್ಯಾಂಕಿಗೆ ತಿಳಿಸಿದ್ದರೂ ಹಣ ವರ್ಗಾವಣೆ ಮಾಡಿರುವುದರಿಂದ ಯೂನಿಯನ್ ಬ್ಯಾಂಕ್ ಮ್ಯಾನೇಜರ್ ಮತ್ತು ಸಿಬ್ಬಂದಿ , ಕೆಐಎಡಿಬಿ ನಿವೃತ್ತ ನೌಕರ ನಜೀರ್ ಅಹಮ್ಮದ್ , ಶೃತಿ ಕೆ.ಟಿ, ಬೇಬಿ ಆಯೆಷಾ, ರಾಕೇಶ್ ಬಡಗಲ, ವಿಜಯಲಕ್ಷ್ಮಿಯವರ ಮೇಲೆ ಪ್ರಕರಣ ದಾಖಲಾಗಿದೆ.

ತನಿಖೆಯಲ್ಲಿ ಜಿ.ಎಚ್ ಶ್ರೀಧರ್ ಅವರು ವಲಯ ಕಚೇರಿಯ ಕಾರ್ಯನಿರ್ವಸಹಕ ಇಂಜಿನೀಯರ್ ಆಗಿದ್ದಾಗ 12,19,01,185. ಜನಾರ್ದನ ನಾಯ್ಕ ಎಂ ಇದ್ದಾಗ, 2,48,69,333, ಸದ್ಯ ಎಸ್.ಎಂ. ಕೊಳಲಗಿ ಅವರ ಅವಧಿಯಲ್ಲಿ 1,50,28,398 ಹಣ ವಿವಿಧ ಖಾತೆಗಳಿಗೆ ವರ್ಗಾವಣೆಯಾಗಿರುವುದು ಪತ್ತೆಯಾಗಿದೆ.

# ವೈದ್ಯರ ನಿರ್ಲಕ್ಷ್ಯದೇವದಾಸಿ ಮಹಿಳೆಗೆ 3 ಬಾರಿ ಶಸ್ತ್ರ ಚಿಕಿತ್ಸೆ ತನಿಖೆ ಪರಿಹಾರಕ್ಕೆ ಒತ್ತಾಯ



**ಬಳ್ಳಾರಿ, ಏ.15:** ಇಲ್ಲಿನ ಬಿಎಂಸಿ ಆರ್ ಸಿ ಆಸ್ಪತ್ರೆಯಲ್ಲಿನ ವೈದ್ಯರ ನಿರ್ಲಕ್ಷದಿಂದ ದೇವದಾಸಿ ಮಹಿಳೆಗೆ ಆಗಿರುವ ಅನ್ಯಾಯದ ಬಗ್ಗೆ ತನಿಖೆ ಆಗಬೇಕು ಮತ್ತು 50 ಲಕ್ಷ ರೂ ಪರಿಹಾರ ನೀಡಬೇಕೆಂದು ದೇವದಾಸಿ ಮಹಿಳಾ ಸಂಘದ ಗೌರವ ಅಧ್ಯಕ್ಷ ಯು.ಬಸವರಾಜ ಹೇಳಿದ್ದಾರೆ.

ಅವರಿಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ನಡೆಸಿ. ಬಳ್ಳಾರಿ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ದೇವದಾಸಿ ಮಹಿಳಾ ಸಂಘದ ಸಂಡೂರು ತಾಲೂಕಿನ ಕಾರ್ಯದರ್ಶಿ ಕೊಂಡಾಪುರದ ಹೆಚ್.ದುರ್ಗಮ್ಮ (43) ಇವರು 2025 ರ ಅಗಷ್ಟ್ ನಲ್ಲಿ ಅನಾರೋಗ್ಯದಿಂದ ಆಸ್ಪತ್ರೆಗೆ ಹೋದಾಗ ಹಿಮೋಗ್ಲೋಬಿನ್ ಕಡಿಮೆ ಇದೆಂದು ಹೇಳಲಾಗುತ್ತದೆ. ನಂತರ ಗರ್ಭಕೋಶ ತೆಗೆಯಲು ಹೇಳಲಾಗುತ್ತದೆ. ಶಸ್ತ್ರ ಚಿಕಿತ್ಸೆ ಮಾಡಲಾಗುತ್ತದೆ. ನಂತರ ನಿರಂತರವಾಗಿ ಮೂತ್ರ ವಿಸರ್ಜನೆ ಆಗುತ್ತದೆ. ಪುನಃ ಆಸ್ಪತ್ರೆಗೆ ಬಂದಾಗ. ಟ್ರಾಮಕೇರ್ ಆಸ್ಪತ್ರೆಗೆ ದಾಖಲಾಗುತ್ತದೆ. ಈ ಮೊದಲ ಶಸ್ತ್ರ ಚಿಕಿತ್ಸೆ ವೇಳೆ ನರವೊಂದನ್ನು ಸರಿಪಡಿಸಿಲ್ಲ ಎಂದು ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಮನೆಗೆ ಹೋದಮೇಲೆ ಹೊಟ್ಟೆನೋವು ಹೆಚ್ಚಾಗಿದೆ.

ಆಗ ಹೊಸಪೇಟೆಯ ಆಸ್ಪತೆಯಲ್ಲಿ ದಾಖಲಾದಾಗ ಪರೀಕ್ಷೆ ಮಾಡಿದಾಗ ಹೊಟ್ಟೆಯಲ್ಲಿ ಶಸ್ತ್ರಚಿಕಿತ್ಸೆ ಮಾಡುವಾಗ ಬಿಟ್ಟ ಸ್ಟೀಲ್ ರಿಂಗ ಇರುವುದು ಪತ್ತೆ ಆಗಿದೆ. ಈ ಚಿಕಿತ್ಸೆ ಮಾಡಿದವರು ಟ್ರಾಮಕೇರ್ ಆಸ್ಪತ್ರೆಯ ಡಾ. ಇಮ್ದಾದ್ ಅಲಿ ನಂತರ ಅವರೇ ತಮ್ಮ ಖಾಸಗಿ ಆಸ್ಪತಗೆ ದುರ್ಗಮ್ಮಳನ್ನು ಕರೆದುಕೊಂಡು ಹೋಗಿ ಸ್ಟೀಲ್ ರಿಂಗ್ ತೆಗೆದಿದ್ದಾರೆ. ಅದಕ್ಕೆ 16750 ರೂ ಶುಲ್ಕ ಪಡೆದಿದ್ದಾರಂತೆ.ಈ ವರೆಗಿನ ಚಿಕಿತ್ಸೆಗೆ ಒಟ್ಟು 3 ಲಕ್ಷ ರೂ ವೆಚ್ಚ ಮಾಡಿರುವುದಾಗಿ ದುರ್ಗಮ್ಮ ಹೇಳಿದ್ದಾರೆ.

ನನಗೆ ಕೇವಲ ರಕ್ತಸ್ರಾವದ ಚಿಕಿತ್ಸೆಗಾಗಿ ಹಲವು ತಿಂಗಳಕಾಲ ಆಸ್ಪತ್ರೆಗಳಲ್ಲಿ ನರಕ ಯಾತನೆ ಅನುಭವಿಸಿದಂತಾಗಿದೆಂದು ತಮ್ಮ ಅಳಲು ತೋಡಿಕೊಂಡರು.
ಅದಕ್ಕಾಗಿ ಈ ಬಗ್ಗೆ ತನಿಖೆ ಆಗಬೇಕು ಮತ್ತು ದುರ್ಗಮ್ಮಳಿಗೆ ಆದ ಮಾನಸಿಕ ಮತ್ತು ದೈಹಿಕ ಹಿಂಸೆಗಾಗಿ 50 ಲಕ್ಷ ರೂ ಪರಿಹಾರ ನೀಡಬೇಕೆಂದು ಯು ಬಸವರಾಜ್ ಆಗ್ರಹಿಸಿದ್ದಾರೆ. ಸುದ್ದಿಗೋಷ್ಟಿಯಲ್ಲಿ ಸ್ವಾಮಿ, ಎನ್.ಶಂಕಣ್ಣ ಮೊದಲಾದವರು ಇದ್ದರು.

# ಬಿಹಾರ ಸಿಎಂ ಆಗಿ ಸಾಮ್ರಾಟ್ ಪ್ರಮಾಣ ವಚನ: ಬಿಜೆಪಿಯ ಹೊಸ ಪರ್ವ



**ಪಾಟ್ನಾ,ಏ.15–** ಬಿಹಾರದಲ್ಲಿ ನೂತನ ಮುಖ್ಯಮಂತ್ರಿಯಾಗಿ ಬಿಜೆಪಿ ನಾಯಕ ಸಾಮ್ರಾಟ್ ಚೌಧರಿ ಪ್ರಮಾಣ ಸ್ವೀಕರಿಸುವ ಮೂಲಕ ಬಿಜೆಪಿಯ ಹೊಸ ಪರ್ವ ಆರಂಭವಾಗಿದೆ.
ಇದೇ ವೇಳೆ ಜೆಡಿಯು ಶಾಸಕರಾದ ವಿಜಯ್ ಕುಮಾರ್ ಚೌಧರಿ ಮತ್ತು ಬಿಜೇಂದ್ರ ಪ್ರಸಾದ್ ಯಾದವ್ ಉಪ ಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದರು.
ಲೋಕಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿಬಿಜೆಪಿ ನಾಯಕ ಸಾಮ್ರಾಟ್ ಚೌಧರಿ ಬಿಹಾರದ 21 ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು, ರಾಜ್ಯಪಾಲ ಸೈಯದ್ ಅತಾ ಹಸ್ನೈನ್ ಅವರು ಅಧಿಕಾರ ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು

ಕಳೆದ 21 ವರ್ಷದಿಂದ ಮುಖ್ಯಮಂತ್ರಿಯಾಗಿದ್ದ ನಿತೀಶ್ ಕುಮಾರ್ ಅವರು ರಾಜ್ಯಸಭೆಗೆ ಆಯ್ಕೆಯಾದ ಹಿನ್ನೆಲೆಯಲ್ಲಿ ನಿನ್ನೆಯಷ್ಟೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು., ಇದರ ಬೆನ್ನಲ್ಲೇ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರನ್ನು ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕನ್ನಾಗಿ ಆಯ್ಕೆ ಮಾಡಲಾಗಿತ್ತು, ಇಂದು ಲೋಕಭವನದಲ್ಲಿ ಬಿಹಾರದ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಹೊಸ ಭಾಷ್ಯ ಬರೆದಿದ್ದಾರೆ.

ಸಾಮ್ರಾಟ್ ಚೌಧರಿ ಪ್ರಮಾಣವಚನದೊಂದಿಗೆ, ಬಿಜೆಪಿ ಪ್ರಸ್ತುತ ದೇಶದಲ್ಲಿ 16 ಮುಖ್ಯಮಂತ್ರಿಗಳನ್ನು ಹೊಂದಿದೆ ಮತ್ತು ಇದುವರೆಗೆ ತನ್ನ ಸರ್ಕಾರ ಹೊಂದಿರುವ 19 ನೇ ರಾಜ್ಯ ಮತ್ತು ಕೇಸರಿ ಪಕ್ಷದ ಇತಿಹಾಸದಲ್ಲಿ 57 ನೇ ಮುಖ್ಯಮಂತ್ರಿ ಹೊಂದಿದ ಇತಿಹಾಸ ನಿರ್ಮಾಣ ಮಾಡಿದೆ.

ಉತ್ತರ ಪ್ರದೇಶ, ಮಧ್ಯಪ್ರದೇಶ, ಛತ್ತೀಸ್‌ಗಢ, ರಾಜಸ್ಥಾನ, ಉತ್ತರಾಖಂಡ, ಹರಿಯಾಣ ಮತ್ತು ದೆಹಲಿ ಸೇರಿದಂತೆ ಪ್ರಮುಖ ಹಿಂದಿ ಹೃದಯಭೂಮಿ ರಾಜ್ಯಗಳನ್ನು ಬಿಜೆಪಿ ಈಗಾಗಲೇ ಆಳುತ್ತಿದೆ, ಬಿಹಾರ ಬಹಳ ಹಿಂದಿನಿಂದಲೂ ಗಮನಾರ್ಹ ಅಪವಾದವಾಗಿ ಉಳಿದಿದೆ, ಈಗ ಬಿಹಾರವೂ ಬಿಜೆಪಿ ತೆಕ್ಕೆಗೆ ಬಂದಿಎ
ಈ ಹಿಂದೆ ಉಪಮುಖ್ಯಮಂತ್ರಿಯಾಗಿದ್ದ ಚೌಧರಿ ಅವರನ್ನು ರಾಜ್ಯಸಭಾ ಸದಸ್ಯರಾಗಿರುವ ನಿತೀಶ್ ಕುಮಾರ್ ಅವರ ಸಮ್ಮುಖದಲ್ಲಿ ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕರನ್ನಾಗಿ ನೇಮಿಸಲಾಯಿತು.

ಈಗ ರಾಜ್ಯಸಭಾ ಸಂಸದರಾಗಿರುವ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರು ತಮ್ಮ ಸಚಿವ ಸಂಪುಟವನ್ನು ವಿಸರ್ಜಿಸಿದ ನಂತರ ನಿನ್ನೆ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದಿದ್ದರು. ಹೊರಹೋಗುವ ಸರ್ಕಾರದಲ್ಲಿ, ಸಾಮ್ರಾಟ್ ಚೌಧರಿ ಉಪಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು ಮತ್ತು ಪ್ರಮುಖ ಗೃಹ ಖಾತೆಯನ್ನು ನಿರ್ವಹಿಸಿದ್ದರು, 2017 ರಲ್ಲಿ ಬಿಜೆಪಿ ಸೇರಿದ ಚೌಧರಿ ಪಕ್ಷದ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದರು.

ಬಿಹಾರದ ಸಂಕೀರ್ಣ ರಾಜಕೀಯ ಭೂದೃಶ್ಯದಲ್ಲಿ ಅವರ ಉನ್ನತಿಯು ಜಾತಿ ಮಹತ್ವ ಹೊಂದಿದೆ. ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಂಡ ನಂತರ ಸಮ್ಮಿಶ್ರ ಸರ್ಕಾರ ಪತನಗೊಂಡ ನಂತರ 1968 ರಲ್ಲಿ ಕೇವಲ ಐದು ದಿನಗಳ ಕಾಲ ಸತೀಶ್ ಪ್ರಸಾದ್ ಸಿಂಗ್ ಅವರ ಸಂಕ್ಷಿಪ್ತ ಅಧಿಕಾರಾವಧಿಯ ನಂತರ, ಪ್ರಭಾವಿ ಕೊಯೇರಿ ಸಮುದಾಯದಿಂದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಎರಡನೇ ನಾಯಕರಾಗಿದ್ದಾರೆ.

**ಸಾಮ್ರಾಟ್ ಚೌಧರಿ ರಾಜಕೀಯ ಪ್ರಯಾಣ**
1968 ರಲ್ಲಿ ಜನಿಸಿದ ಸಾಮ್ರಾಟ್ ಚೌಧರಿ ರಾಜಕೀಯವಾಗಿ ಪ್ರಭಾವಿ ಕುಟುಂಬದಿಂದ ಬಂದವರು. ಅವರ ತಂದೆ ಶಕುನಿ ಚೌಧರಿ, ತಾರಾಪುರ ಕ್ಷೇತ್ರದಿಂದ ಆರು ಬಾರಿ ಶಾಸಕರಾಗಿದ್ದರು, ಆದರೆ ಅವರ ತಾಯಿ ಪಾರ್ವತಿ ದೇವಿ 1998 ರಲ್ಲಿ ಸಮತಾ ಪಕ್ಷದ ಟಿಕೆಟ್‌ನಲ್ಲಿ ಅದೇ ಸ್ಥಾನವನ್ನು ಗೆದ್ದರು.
1990 ರಲ್ಲಿ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದ ಚೌಧರಿ, ವರ್ಷಗಳಲ್ಲಿ ಅನೇಕ ರಾಜಕೀಯ ಬದಲಾವಣೆ ಮಾಡಿದ್ದಾರೆ, ಅಂತಿಮವಾಗಿ 2017 ರಲ್ಲಿ ಬಿಜೆಪಿಗೆ ಸೇರುವ ಮೊದಲು ಲಾಲು ಯಾದವ್ ಅವರ ಆರ್‌ಜೆಡಿಯಿಂದ ನಿತೀಶ್ ಕುಮಾರ್ ಅವರ ಜೆಡಿಯುಗೆ ಸ್ಥಳಾಂತರಗೊಂಡಿದ್ದರು, ಬಿಜೆಪಿ ಮೂಲಕ ಮುಖ್ಯಮಂತ್ರಿಯಾಗಿದ್ಧಾರೆ

# ಭೈರವೈಕ್ಯ ಮಂದಿರ ಲೋಕಾರ್ಪಣೆ: ಮೋದಿಯಿಂದ ಶ್ರೀಗಳ ಗುಣಗಾನ

**ಮಂಡ್ಯ, ಏ. 15–** ಆದಿಚುಂಚನಗಿರಿ ಮಠವು ಸಮಾಜಕ್ಕೆ ಆಧ್ಯಾತ್ಮಿಕ ಮಾರ್ಗದರ್ಶನ ನೀಡುತ್ತಿದೆ. ನಿರ್ಮಲಾನಂದನಾಥ ಸ್ವಾಮೀಜಿ ಮಠದ ಪರಂಪರೆಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಅನ್ನ ಅಕ್ಷರ, ಆರೋಗ್ಯ ಆಧ್ಯಾತ್ಮ ಸೇರಿದಂತೆ 9 ತತ್ವ ಸಿದ್ಧಾಂತವನ್ನು ಭಕ್ತರಿಗೆ ಮಠವು ಉಣಬಡಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದರು. ಮಂಡ್ಯ ಜಿಲ್ಲೆ ನಾಗಮಂಗಲದ ಆದಿಚುಂಚನಗಿರಿಯಲ್ಲಿ ಭೈರವೈಕ್ಯ ಮಂದಿರ ಉದ್ಘಾಟನೆ ಮಾಡಿ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಆದಿಚುಂಚನಗಿರಿ ಮಠಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಸಮಾಜಕ್ಕೆ ಆದಿಚುಂಚನಗಿರಿ ಮಠ ಸೇವೆ ಅಪಾರ. ಅದನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಶ್ರೀಮಠವು ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯಗಳು ನಡೆಯುತ್ತಿವೆ. ಮಠ ಸೇವೆ, ಕಾರ್ಯ ಸದಾ ಜೀವಂತ. ಸಾಮಾನ್ಯ ಜನರ ಜೀವನ ಬಗ್ಗೆ ಬಾಲಗಂಗಾಧರನಾಥ ಶ್ರೀಗಳಿಗೆ ಅರಿವಿತ್ತು. ಶಾಲೆಯಿಂದ ಹಿಡಿದು ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನ ಕಟ್ಟಿದರು. ಶೈಕ್ಷಣಿಕ ಕ್ಷೇತ್ರದಲ್ಲಿ ನೂರಾರು ಸಂಸ್ಥೆಗಳನ್ನ ಕಟ್ಟಿದರು. ನಮ್ಮ ಸರ್ಕಾರವೂ ಕೂಡ ಅದೇ ಆಶಯವನ್ನು ಹೊಂದಿ ಕೆಲಸ ಮಾಡುತ್ತಿದೆ ಬಾಲಗಂಗಾಧರನಾಥ ಶ್ರೀಗಳು ಕರುಣೆಯ ಪ್ರತಿರೂಪವಾಗಿದ್ದರು ಶ್ರೀಗಳಲ್ಲಿ ಬಹುದೊಡ್ಡ ಆಧ್ಯಾತ್ಮಿಕ ಶಕ್ತಿ ಇತ್ತು ಎಂದು ನುಡಿದರು. ಜನರ ಜೀವನ ಉತ್ತಮಗೊಳಿಸಲು ನಿರ್ಮಲಾನಂದನಾಥ ಶ್ರೀಗಳು ಶ್ರಮಿಸಿದ್ದಾರೆ. ಕೋಟ್ಯಾಂತರ ಬಡವರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ತಮ್ಮ ಗುರುಗಳಂತೆ ನಿರ್ಮಲಾನಂದನಾಥ ಶ್ರೀಗಳು ಮುನ್ನಡೆಯುತ್ತಿದ್ದಾರೆ. ಮಠವು ಅನ್ನ ಅಕ್ಷರ ಆರೋಗ್ಯ ಅಧ್ಯಾತ್ಮ ಸೇರಿದಂತೆ 9 ತತ್ವ ಸಿದ್ಧಾಂತವನ್ನ



ಭಕ್ತರಿಗೆ ಉಣಬಡಿಸುತ್ತಿದೆ ಎಂದು ಗುಣಗಾನ ಮಾಡಿದರು.ಅರಣ್ಯ ಸಂರಕ್ಷಣೆ ಸ್ವಚ್ಚತಾ ಕಾರ್ಯ ನಮ್ಮೆಲ್ಲರ ಕರ್ತವ್ಯಮಂಡ್ಯ ನೀರಿನ ಮಹತ್ವವನ್ನು ಹೊಂದಿದೆ ಇಡೀ ಪ್ರದೇಶ ಕಾವೇರಿ ಮಾತೆಯ ಆಶೀರ್ವಾದದಿಂದ ಫಲವತ್ತಾಗಿದೆ ನಾವೆಲ್ಲರೂ ನೀರಿನ ಉಳಿಸುವ ಸರಿಯಾಗಿ ಬಳಕೆ ಮಾಡುವ ಪ್ರತಿಜ್ಞೆ ಮಾಡೋಣ. ತಾಯಿಯ ಹೆಸರಲ್ಲಿ ಒಂದು ಗಿಡ ನೆಡೋಣ. ಅರಣ್ಯ ಸಂರಕ್ಷಣೆ ಸ್ವಚ್ಚತಾ ಕಾರ್ಯ ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು ಸ್ವದೇಶಿ ಆಹಾರ ಬಳಸಿಎಣ್ಣೆ ಪದಾರ್ಥ ಸೇವನೆ ಕಡಿಮೆ ಮಾಡಿ, ಆರೋಗ್ಯ ಕಾಳಜಿ ವಹಿಸಿ. ವಿದೇಶಿ ಉತ್ಪನ್ನಗಳ ಬಳಕೆ ಕಡಿಮೆ ಮಾಡಿ, ದೇಶಿ ಉತ್ಪನ್ನಗಳನ್ನು ಹೆಚ್ಚು ಖರೀದಿಸಿ. ಸ್ವದೇಶಿ ಆಹಾರದ ಕಡೆಗೆ ಗಮನಕೊಡಿ ಎಂದು ಪ್ರಧಾನಿ ಮೋದಿ ಕರೆ ನೀಡಿದರು.ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡರು, ಮಠದ ನಿರ್ಮಲಾನಂದನಾಥಸ್ವಾಮೀಜಿ, ಕೇಂದ್ರ ಸಚಿವರಾದ ಹೆಚ್ ಡಿ ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ವಿಪಕ್ಷ ನಾಯಕ ಆರ್.ಅಶೋಕ್ ಉಪಸ್ಥಿತರಿದ್ದರು.

# ಅಂತ್ಯದತ್ತ ಯುದ್ಧ ಇರಾನ್ ಮೇಲೆ ಎಲ್ಲವೂ ಅವಲಂಬನೆ

**ವಾಷಿಂಗ್ಟನ್,ಏ.15–** ಅಮೆರಿಕ–ಇರಾನ್ ನಡುವಿನ ಯುದ್ಧ ಅಂತ್ಯಗೊಳ್ಳುವ ಹಂತಕ್ಕೆ ಬಂದಿದೆ ಎಂದು ಹೇಳಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಆದರೆ ಯುದ್ಧ ಇನ್ನೂ ಮುಗಿದಿಲ್ಲ' ಎಲ್ಲವೂ ಇರಾನ್ ಮೇಲೆ ಅವಲಂಬಿಸಿದೆ ಎಂದು ಎಚ್ಚರಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸುವ ಉದ್ದೇಶದಿಂದ ಸಮಾನಾಂತರ ರಾಜತಾಂತ್ರಿಕ ಪ್ರಯತ್ನಗಳ ಜೊತೆಗೆ ನಿರಂತರ ಉದ್ವಿಗ್ನತೆಯ ನಡುವೆ ಇರಾನ್‌ನೊಂದಿಗೆ ಎರಡನೇ ಸುತ್ತಿನ ಮಾತುಕತೆಗೆ ಅಮೆರಿಕ ಮುಂದಾಗಿದೆ. ಆದರೆ ಅಮೆರಿಕ ಇನ್ನೂ ಸೇನಾ ಕಾರ್ಯಾಚರಣೆ ಮುಗಿಸಿಲ್ಲ ಎಂದಿದ್ದಾರೆ.ಸುದ್ಧಿಗಾರೊಂದಿಗೆ ಮಾತನಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಜೊತೆಗಿನ ಎರಡು ವಾರಗಳ ತಾತ್ಕಾಲಿಕ ಕದನ ವಿರಾಮ ಮುಂದಿನವಾರ ಅಂತ್ಯಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಇರಾನ್ ಜೊತೆಗೆ ಎರಡನೇ ಸುತ್ತಿನ ಮಾತುಕತೆಗೆ ಅಮೆರಿಕ ಮುಂದಾಗಿದೆ. ಯುದ್ಧ ಮುಗಿಯುವ ಸಮಯ ಹತ್ತಿರಕ್ಕೆ ಬಂದಿದೆ. ಆದರೆ ಅದು ಇರಾನ್ ನಡೆಯ ಮೇಲೆ ಅವಲಂಬಿತವಾಗಿದೆ ಎಂದು ತಿಳಿಸಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವೆ ಇಸ್ಲಾಮಾಬಾದ್ ನಲ್ಲಿ ನಡೆದ ಶಾಂತಿ ಮಾತುಕತೆಯಲ್ಲಿ ಉಭಯ ದೇಶಗಳ ನಡುವೆ ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಇರಾನಿನ ಬಂದರುಗಳನ್ನು ಗುರಿಯಾಗಿಸಿ ದಾಳಿ ಮಾಡುವುದಾಗಿ ಅಮೆರಿಕ ಬೆದರಿಕೆ ಹಾಕಿತ್ತು, ಇದಕ್ಕೆ ಮಣಿದ ಇರಾನ್ ಎರಡನೇ ಸುತ್ತಿನ ಮಾತುಕತೆಗೆ ಮುಂದಾಗಿದೆ ಎಂದಿದ್ದಾರೆ.ಜಗತ್ತಿನ ಪ್ರಮುಖ ಕಚ್ಚಾ ತೈಲ ಪೂರೈಕೆ ಮಾರ್ಗವಾದ ಹೊರ್ಮುಜ್ ಜಲಸಂಧಿಯಲ್ಲಿ ನಡೆಯುತ್ತಿರುವ ಅಮೆರಿಕ ನೌಕಾ ದಿಗ್ಬಂಧನದ ಮಧ್ಯೆ ಈ ಹೇಳಿಕೆಗಳು ಬಂದಿವೆ. ಸಾವಿರಾರು ಅಮೆರಿಕನ್ ಸಿಬ್ಬಂದಿ ಮತ್ತು ಬಹು ಯುದ್ಧನೌಕೆಗಳಿಂದ ಜಾರಿಗೊಳಿಸಲಾದ ದಿಗ್ಬಂಧನ ಈಗಾಗಲೇ ಹಲವಾರು ಹಡಗುಗಳನ್ನು ಇರಾನಿನ ಜಲಪ್ರದೇಶದಿಂದ ಹಿಂತಿರುಗುವಂತೆ ಮಾಡಿದೆ ಎಂದು ತಿಳಿಸಿದ್ದಾರೆ.
ಇರಾನ್‌ನೊಂದಿಗೆ ಯುದ್ಧ ಮುಗಿಯುವ ಹಂತಕ್ಕೆ ಬಂದಿದೆ ಆದರೆ ಇನ್ನೂ ಮುಗಿದಿಲ್ಲ, ಈ ಬಗ್ಗೆ ಮಾತುಕತೆಗಳು ನಡೆಯಲಿವೆ. ಇದರಿಂದ ಇರಾನ್ ನಡೆಯ ಮೇಲೆ ಎಲ್ಲವೂ ಅವಲಂಬಿತವಾಗಿದೆ ಎಂದಿದ್ದಾರೆ.ಇರಾನ್ ಮೇಲೆ ಅಮೆರಿಕ ದಾಳಿ ನಡೆಸಿದ ಹಲವು ಮೂಲಸೌಕರ್ಯ ನಾಶ ಮಾಡಿದ್ದೇವೆ, ಇದನ್ನು ಪುನರ್ನಿರ್ಮಿಸಲು ಇರಾನ್‌ಗೆ ಇನ್ನೂ 20 ವರ್ಷಗಳು ಬೇಕಾಗಬಹುದು ಎಂದು ತಿಳಿಸಿದ್ದಾರೆ.

ಇನ್ನೆರಡು ದಿನದಲ್ಲಿ ಇರಾನ್–ಅಮೆರಿಕ ಮಾತುಕತೆ
ಅಮೆರಿಕ–ಇರಾನ್ ನಡುವೆ ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಮಾತುಕತೆ ವಿಫಲವಾದ ನಂತರ ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಇನ್ನೆರಡು ದಿನದಲ್ಲಿ ಇಸ್ಲಾಮಾಬಾದ್‌ನಲ್ಲಿ ಮಾತುಕತೆ ನಡೆಯುವ ಸಾಧ್ಯತೆ ಇದೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಳಿವು ನೀಡಿದ್ದಾರೆ.ಇರಾನ್‌ನ ಎಲ್ಲಾ ಬಂದರುಗಳಿಗೆ ಅಮೆರಿಕ ದಿಗ್ಬಂಧನ ಹಾಕುವುದಾಗಿ ಬೆದರಿಕೆ ಹಾಕಿದ ನಡುವೆ ಇರಾನ್ ಅಮೆರಿಕ ಜೊತೆ ಮಾತುಕತೆ ಮುಂದಾಗಿದ್ದು ಈ ವಾರದಲ್ಲಿ ಮತ್ತೆ ಮಾತುಕತೆ ಪುನರ್ ಆರಂಭವಾಗಬಹುದು ಎಂದು ಮಾಹಿತಿ ನೀಡಿದ್ದಾರೆ.

ಈ ಬಾರಿಯೂ ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಮಾತುಕತೆ ನಡೆಯುವ



ನಿರೀಕ್ಷೆ ಇದೆ, ಹೀಗಾಗಿ "ನೀವು ಇಸ್ಲಾಮಾಬಾದ್‌ನಲ್ಲಿಯೇ ಇರಬೇಕು, ಮುಂದಿನ ಎರಡು ದಿನಗಳಲ್ಲಿ ಏನಾದರೂ ಸಂಭವಿಸಬಹುದು, ಮತ್ತು ನಾವು ಅಲ್ಲಿಗೆ ಹೋಗಲು ಹೆಚ್ಚು ಒಲವು ತೋರುತ್ತಿದ್ದೇವೆ" ಎಂದು ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ.
ಕಾರ್ಯಾಚರಣೆಯ ಮೊದಲ 24 ಗಂಟೆಗಳಲ್ಲಿ ಯಾವುದೇ ಹಡಗುಗಳು ಇರಾನ್ ಬಂದರು ಮತ್ತು ಕರಾವಳಿ ಪ್ರದೇಶಗಳ ಮೇಲೆ ಅಮೆರಿಕ ಜಾರಿಗೊಳಿಸಿದ ದಿಗ್ಬಂಧನದ ಮೂಲಕ ಹಾದು ಹೋಗಿಲ್ಲ ಎಂದು ಅಮೆರಿಕನ್ ಮಿಲಿಟರಿ ಹೇಳಿದ ಬೆನ್ನಲ್ಲೇ ಡೊನಾಲ್ಡ್ ಟ್ರಂಪ್ ಅವರಿಂದ ಈ ಹೇಳಿಕೆ ಬಂದಿದೆ.ಮುಂದಿನ ವಾರ ಮುಕ್ತಾಯಗೊಳ್ಳಲಿರುವ ಎರಡು ವಾರಗಳ ಕದನ ವಿರಾಮದ ಸಾಧ್ಯತೆ ಬಿಕ್ಕಟ್ಟು ಅಂತ್ಯಗೊಳ್ಳಲಿದೆಯೇ ಅಥವಾ ಮತ್ತೆ ಮುಂದುವರಿಯಲಿದೆ ಎನ್ನುವ ಅನುಮಾನ ಕೂಡ ಹುಟ್ಟು ಹಾಕಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಗೆ ಇರಾನ್ ಯಾವುದೇ ರೀತಿಯ ಪ್ರತಿಕ್ರಿಯೆ ನೀಡಿಲ್ಲ, ಈ ನಡುವೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆಗಳು ಪುನರಾರಂಭಗೊಳ್ಳುವ ಸಂಭವನೀಯ" ಹೆಚ್ಚಿದೆ ಎಂದಿದ್ದಾರೆ.ಗಲ್ಫ್, ಪಾಕಿಸ್ತಾನ ಮತ್ತು ಇರಾನಿನ ಅಧಿಕಾರಿಗಳು ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆ ತಂಡಗಳು ಈ ವಾರದ ಕೊನೆಯಲ್ಲಿ ನಡೆಯುವ ನಿರೀಕ್ಷೆ ಇದೆ. ರಾಜತಾಂತ್ರಿಕತೆಯು ತೈಲ ಮಾರುಕಟ್ಟೆ ಸುಗಮಗೊಳಿಸಲು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ.ಫೆಬ್ರವರಿ 28 ರಂದು ಅಮೆರಿಕ ಮತ್ತು ಇಸ್ರೇಲ್ ವಾಯುದಾಳಿಗಳಿಂದ ದಾಳಿಗೊಳಗಾದ ನಂತರ, ತೈಲ ಮತ್ತು ಅನಿಲ ಸಾಗಣೆಗೆ ನಿರ್ಣಾಯಕ ಜಾಗತಿಕ ಜಲಮಾರ್ಗವಾದ ಹೊರ್ಮುಜ್ ಜಲಸಂಧಿ ಮುಚ್ಚಿದ ಹಿನ್ನೆಲೆಯಲ್ಲಿ ಈ ಉದ್ವಿಗ್ನ ಪರಿಸ್ಥಿತಿ ನಿರ್ಮಾಣಮಾಡಿದೆ.

ಒಂದು ಡಜನ್‌ಗಿಂತಲೂ ಹೆಚ್ಚು ಅಮೆರಿಕ ಯುದ್ಧನೌಕೆಗಳು ಮತ್ತು ಸುಮಾರು 10,000 ಅಮೆರಿಕ ಮಿಲಿಟರಿ ಸಿಬ್ಬಂದಿ ಈಗ ಇರಾನ್ ಬಂದರು ಪ್ರವೇಶಿಸುವ ಅಥವಾ ಹೊರಹೋಗುವ ಯಾವುದೇ ದೇಶದ ಹಡಗುಗಳ ವಿರುದ್ಧ ದಿಗ್ಬಂಧನ ಜಾರಿಗೊಳಿಸುತ್ತಿದ್ದಾರೆ.
ದೇಶದ ಎರಡು ಪ್ರಮುಖ ಹಣದ ಮೂಲಗಳಾದ ತೈಲ ಆದಾಯ ಮತ್ತು ನಿರ್ಣಾಯಕ ಜಲಮಾರ್ಗದ ಮೂಲಕ ಸಾಗಲು ಇರಾನ್ ಹಡಗುಗಳಿಂದ ಬೇಡಿಕೆಯಿಡುವ ಗಮನಾರ್ಹ ಸುಂಕಗಳನ್ನು ಗುರಿಯಾಗಿಸಿಕೊಂಡು ಇರಾನ್ ಮೇಲೆ ಒತ್ತಡ ಹೇರುವ ಗುರಿ ಹೊಂದಿದೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE